ನಿಯಮ - 118ರ ಮೇರೆಗೆ ದಿನಾಂಕ 12-07-1999 ರಂದು ವಿಧಾನಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳು ಇಲ್ಲದೆ ಅಂಗೀಕರಿಸಿದೆಯೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1. ಕರ್ನಾಟಕ ಧನ ವಿನಿಯೋಗ ಸಂಖ್ಯೆ 2 ವಿಧೇಯಕ, 1999.
2. ಕರ್ನಾಟಕ ಧನ ವಿನಿಯೋಗ ಸಂಖ್ಯೆ 3 ವಿಧೇಯಕ, 1999.
3. ಕರ್ನಾಟಕ ತೆರಿಗೆ ಕಾನೂನುಗಳ 3ನೇ ತಿದ್ದುಪಡಿ ವಿಧೇಯಕ, 1999.

ಹತ್ತನೇ ವಿಧಾನ ಸಭೆಯಲ್ಲಿ ನಡೆದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹತ್ತನೇ ವಿಧಾನ ಸಭೆಯ ಪ್ರಥಮ ಅಧಿವೇಶನವು ದಿನಾಂಕ 26.12.1994 ರಂದು ಸಮಾವೇಶಗೊಂಡು 1994-99ರ ಅವಧಿಯಲ್ಲಿ ಒಟ್ಟು 228 ದಿನಗಳ ಕಾರ್ಯಕಲಾಪಗಳನ್ನು ನಡೆಸಿ 1307.37 ಗಂಟೆಗಳ ಕಾಲ ಸಭೆಯನ್ನು ನಡೆಸಿರುತ್ತದೆ.

ವಿಧಾನ ಸಭೆಯ ಅವಧಿಯಲ್ಲಿ ಕರ್ನಾಟಕದ ಸನ್ಮಾನ್ಯ ರಾಜ್ಯಪಾಲರು 6 ಬಾರಿ ಜಂಟಿ ಸದನವನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ರಾಜ್ಯಪಾಲರ ಭಾಷಣದ ವಂದನಾರ್ಪಣಾ ಪ್ರಸ್ತಾವದ ಮೇಲಿನ ಚರ್ಚೆಯು 25 ದಿವಸಗಳ ಕಾಲ ನಡೆದಿದ್ದು, 74 ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿರುತ್ತಾರೆ.

ಈ ಅವಧಿಯಲ್ಲಿ ನಿಧನರಾದ ಹಾಲಿ ಹಾಗೂ ಮಾಜಿ ಸದಸ್ಯರು, ಪ್ರತಿಷ್ಠಿತ ವ್ಯಕ್ತಿಗಳು, ಮಾಜಿ ರಾಷ್ಟ್ರಪತಿಗಳಾದ ಶ್ರೀ ಗ್ಯಾನಿ ಜೈಲ್‌ಸಿಂಗ್, ವಿಧಾನ ಸಭೆಯ ಉಪಾಧ್ಯಕ್ಷರಾಗಿದ್ದ ಶ್ರೀ ಚಂದ್ರಶೇಖರ ಮಾಮನಿ ಹಾಗೂ ಮುಂತಾದ 141 ಗಣ್ಯ ವ್ಯಕ್ತಿಗಳ ನಿಧನದ ಗೌರವಾರ್ಥ ಸಂತಾಪ ಸೂಚನಾ ನಿರ್ಣಯವನ್ನು ಅಂಗೀಕರಿಸಲಾಗಿದೆ.

ವಿಧಾನ ಸಭೆಯ ಅವಧಿಯಲ್ಲಿ 19,234 ಪ್ರಶ್ನೆಗಳನ್ನು ಮಾನ್ಯ ಸದಸ್ಯರುಗಳಿಂದ ಸ್ವೀಕರಿಸಲಾಗಿದ್ದು, ಅವುಗಳಲ್ಲಿ 2704 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಹಾಗೂ 12,401 ಚುಕ್ಕೆ ರಹಿತ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಲಾಗಿದೆ.

ಒಟ್ಟು 152 ಗಮನ ಸೆಳೆಯುವ ಸೂಚನೆಗಳು ಚರ್ಚೆಯಾಗಿರುತ್ತದೆ. ನಿಯಮ 351 ರಡಿಯಲ್ಲಿ 190 ಸೂಚನೆಗಳಿಗೆ ಚರ್ಚಿಸಲು ಅವಕಾಶ ನೀಡಲಾಗಿದೆ. ನಿಯಮ 69 ರಡಿಯಲ್ಲಿ 50 ಸೂಚನೆಗಳಿಗೆ ಅವಕಾಶ ಕಲ್ಪಿಸಿ ಉತ್ತರಿಸಲಾಗಿದೆ. 05 ಸೂಚನೆಗಳಿಗೆ ಅರ್ಧಗಂಟೆ ಕಾಲಾವಧಿ ಚರ್ಚೆಗೆ, ನಿಯಮ 60ರ ಮೇರೆಗೆ 24 ನಿಲುವಳಿ ಸೂಚನೆಗಳಿಗೆ ಪ್ರಸ್ತಾಪ ಮಾಡಲು ಅವಕಾಶ ನೀಡಲಾಯಿತು.

ಒಟ್ಟು 2269 ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಗಿರುತ್ತದೆ. 51 ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲು ಅವಕಾಶ ನೀಡಲಾಗಿದೆ.

1042 ವಿಷಯಗಳನ್ನು ಶೂನ್ಯವೇಳೆಯಲ್ಲಿ ಚರ್ಚಿಸಲು ಅವಕಾಶ ಮಾಡಿಕೊಟ್ಟು ಉತ್ತರ ಒದಗಿಸಲಾಗಿದೆ.

09ಶಾಸನಾತ್ಮಕ ನಿರ್ಣಯಗಳನ್ನು ಸದನದಲ್ಲಿ ಮಂಡಿಸಲು ಅವಕಾಶ ನೀಡಿ, ಅಂಗೀಕರಿಸಲಾಗಿದೆ. ಖಾಸಗಿ ಸದಸ್ಯರ ವಿಧೇಯಕ ಮತ್ತು ನಿರ್ಣಯಗಳ ಅಡಿಯಲ್ಲಿ ಒಂದು ನಿರ್ಣಯವನ್ನು ಸದನದಲ್ಲಿ ಮಂಡಿಸಿ ಚರ್ಚಿಸಲಾಗಿದೆ.

ಹಣಕಾಸು ಸಚಿವರು 1995-96ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ದಿನಾಂಕ 23-3-1995 ರಂದು, 1996-97ನೇ ಸಾಲಿನ ಆಯವ್ಯಯ ಅಂದಾಜುಗಳನ್ನು 4-3-96ರಂದು, 1997-98ರ ಬಜೆಟನ್ನು 18-3-1997 ರಂದು, 1998-99ರ ಆಯವ್ಯಯ ಅಂದಾಜುಗಳನ್ನು 18-3-1998 ರಂದು ಹಾಗೂ 1999-2000ನೇ ಆಯವ್ಯಯ ಅಂದಾಜುಗಳನ್ನು ದಿನಾಂಕ 17-3-1999 ರಂದು ಮಂಡಿಸಿದ್ದು. ಅವುಗಳ ಮೇಲೆ ಒಟ್ಟು 23 ದಿನಗಳು ಚರ್ಚೆ ನಡೆದಿದ್ದು, ಅದರಲ್ಲಿ 49 ಸದಸ್ಯರು ಭಾಗವಹಿಸಿದ್ದರು.

ಅನುದಾನ ಬೇಡಿಕೆಯ ಮೇಲೆ 60 ದಿನಗಳು ಚರ್ಚೆ ನಡೆದಿದ್ದು, 233 ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆಗಳನ್ನು ನೀಡಿರುತ್ತಾರೆ.

ಈ ಅವಧಿಯಲ್ಲಿ ಒಟ್ಟು 8 ಪೂರಕ ಅಂದಾಜುಗಳನ್ನು ಮಂಡಿಸಿ ಅಂಗೀಕರಿಸಲಾಗಿರುತ್ತದೆ.

ಹತ್ತನೇ ವಿಧಾನ ಸಭೆಯ ಅವಧಿಯಲ್ಲಿ ಅಂದಾಜು ಸಮಿತಿಯ 06 ವರದಿಗಳು, ಸಾರ್ವಜನಿಕ ಲೆಕ್ಕಪತ್ರ ಸಮಿತಿಯ 41, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 6, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 4, ಸಾರ್ವಜನಿಕ ಉದ್ಯಮಗಳ ಸಮಿತಿಯ 15, ಖಾಸಗಿ ಸದಸ್ಯರುಗಳ ವಿಧೇಯಕ ಮತ್ತು ನಿರ್ಣಯಗಳ ಸಮಿತಿಯ 4, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯ 12, ಹಕ್ಕುಬಾಧ್ಯತೆಗಳ ಸಮಿತಿಯ 5, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ 5, ಅಧೀನ ಶಾಸನ ರಚನಾ ಸಮಿತಿಯ 4, ಅರ್ಜಿಗಳ ಸಮಿತಿಯ 5, ಸರ್ಕಾರಿ ಭರವಸೆಗಳ ಸಮಿತಿಯ 4, ಜಂಟಿ ಸದನ ಸಮಿತಿಯ 4, ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ 4, ವಿವಿಧ ವಿಷಯ ಸಮಿತಿಗಳ 56 ವರದಿಗಳು ಹಾಗೂ ಇತರೆ 6 ವರದಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ.

ಕರ್ನಾಟಕ ವಿಧಾನಮಂಡಲದಲ್ಲಿ ಮೊದಲ ಬಾರಿಗೆ 1994-95ನೇ ಸಾಲಿನಲ್ಲಿ ವಿಷಯ ಸಮಿತಿಗಳನ್ನು ಸೃಷ್ಟಿಸಲಾಯಿತು. 1998-99ನೇ ಆರ್ಥಿಕ ವರ್ಷದಲ್ಲಿ ವಿಷಯ ಸಮಿತಿಗಳನ್ನು ರದ್ದುಪಡಿಸಲಾಯಿತು.

ಈ ಅವಧಿಯಲ್ಲಿ ವಿಧಾನ ಪರಿಷತ್ತಿನ ವಿಧೇಯಕಗಳು ಸೇರಿದಂತೆ ಒಟ್ಟು

149 ವಿಧೇಯಕಗಳನ್ನು ಪರ್ಯಾಲೋಚಿಸಿ ಅಂಗೀಕರಿಸಲಾಗಿದೆ.

ಒಟ್ಟು 4 ಹಕ್ಕುಚ್ಯುತಿ ಸೂಚನೆಗಳನ್ನು ಹಕ್ಕುಬಾಧ್ಯತಾ ಸಮಿತಿಗೆ ಪರಿಶೀಲಿಸಿ ವರದಿ ನೀಡಲು ಒಪ್ಪಿಸಲಾಗಿದೆ.

ಕಾವೇರಿ ಜನ ವಿವಾದಕ್ಕೆ ಸಂಬಂಧಿಸಿದಂತೆ ಕಾವೇರಿ ನ್ಯಾಯ ಮಂಡಳಿಯು ನೀಡಿದ್ದ ಮಧ್ಯಂತರ ಆದೇಶದ ಬಗ್ಗೆ ಚರ್ಚಿಸಲು ದಿನಾಂಕ 28-12-95 ರಂದು ಒಂದು ದಿನದ ವಿಶೇಷ ಅಧಿವೇಶನವನ್ನು ನಡೆಸಲಾಯಿತು.

ಹತ್ತನೇ ವಿಧಾನ ಸಭೆಯ ಅವಧಿಯಲ್ಲಿ ದಿನಾಂಕ 7-8-1995ರಂದು ಶ್ರೀ ಹೆಚ್.ಡಿ. ದೇವೇಗೌಡರ ಸದನ ಸಂಪುಟದ ವಿರುದ್ಧ ಅವಿಶ್ವಾಸ ನಿರ್ಣಯವನ್ನು, ಅದೇ ರೀತಿ ದಿನಾಂಕ 29-10-1998 ರಂದು ಶ್ರೀ ಜೆ.ಹೆಚ್. ಪಟೇಲ್‌ರವರ ಸಚಿವ ಸಂಪುಟದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಲಾಗಿದ್ದು, ಆ ಎರಡು ನಿರ್ಣಯಗಳು ತಿರಸ್ಕರಿಸಲ್ಪಟ್ಟಿದ್ದವು. ದಿನಾಂಕ 27-1-1998 ರಂದು ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಜೆ.ಹೆಚ್.ಪಟೇಲ್‌ರವರು ಅವರ ಸಚಿವ ಸಂಪುಟದ ಪರವಾಗಿ ವಿಶ್ವಾಸ ನಿರ್ಣಯವನ್ನು ಸದನದಲ್ಲಿ ಮಂಡಿಸಿದ್ದು ಅದನ್ನು ಸದನವು ಅಂಗೀಕರಿಸಿರುತ್ತದೆ.

ಮಾನ್ಯ ಸಭಾನಾಯಕರೆ, ಗೌರವಾನ್ವಿತ ವಿರೋಧ ಪಕ್ಷದ ನಾಯಕರೇ, ವಿವಿಧ ವಿರೋಧಪಕ್ಷಗಳ ಮುಖಂಡರೇ, ಆತ್ಮೀಯ ಸದಸ್ಯರುಗಳೆ, ಶ್ರೀಯುತ ದೇವೇಗೌಡರು ಮೊದಲಿಗೆ ರಾಜ್ಯದ ಅಧಿಕಾರ ಸೂತ್ರವನ್ನು ಹಿಡಿದಾಗ ಅವರು ಮತ್ತು ಅವರ ಸಚಿವಸಂಪುಟದ ಸಹೋದ್ಯೋಗಿಗಳು ನಾನು ಈ ಸಭೆಯ ಅಧ್ಯಕ್ಷನಾಗಿ ಆಯ್ಕೆಯಾಗಬೇಕೆನ್ನುವ ಸೂಚನೆಯನ್ನು ಈ ಸದನದಲ್ಲಿ ಮಂಡಿಸಿ ತಾವೆಲ್ಲರೂ ಅದನ್ನು ಬೆಂಬಲಿಸಿ ನನಗೆ ಅವಕಾಶವನ್ನು ಕಲ್ಪಿಸಿ ಕೊಟ್ಟಿರಿ. ಶ್ರೀಯುತ ದೇವೇಗೌಡರು ನನ್ನ ಮೇಲೆ ಆ ದಿವಸ ಇಟ್ಟ ವಿಶ್ವಾಸ ಮತ್ತು ಗೌರವಕ್ಕೆ ನಾನು ಋಣಿಯಾಗಿದ್ದೇನೆ. ರಾಷ್ಟ್ರದ ರಾಜಕಾರಣದಲ್ಲಿ ಆದಂತಹ ಬದಲಾವಣೆಗಳ ಕಾರಣದಿಂದ ಅವರು ಇನ್ನು ಉನ್ನತಸ್ಥಾನವನ್ನು ಅಲಂಕರಿಸಲು ಇಲ್ಲಿಯ ಅಧಿಕಾರವನ್ನು ಇಂದಿನ ಸಭಾನಾಯಕರಾದ ಶ್ರೀ ಜೆ.ಹೆಚ್. ಪಟೇಲ್‌ರವರಿಗೆ ಹಸ್ತಾಂತರಿಸಿ ಹೋದರು. ಮುಖ್ಯಮಂತ್ರಿಗಳ ಬದಲಾವಣೆಯಿಂದ ನನಗೆ ವೈಯಕ್ತಿಕವಾಗಿ ಯಾವುದೇ ತೊಂದರೆ ತೊಡರು ಉಂಟಾಗಲಿಲ್ಲ. ಮಾನ್ಯ ದೇವೇಗೌಡರ ಹತ್ತಿರ ಮಾತನಾಡುವುದು ಹೇಳುವುದು ಸ್ವಲ್ಪ ಕಷ್ಟವಾಗುತ್ತಿತ್ತು. ಅವರು ಸ್ವಲ್ಪ ಗಂಭೀರ ಸ್ವಭಾವದವರು. ಆದರೆ ಮಾನ್ಯ ಜೆ.ಹೆಚ್. ಪಟೇಲರ ಹತ್ತಿರ ನನಗೆ ಹೆಚ್ಚು ಸಲುಗೆ, ಆತ್ಮೀಯರು ಹೇಗೆ ಬೇಕಾಗಿದ್ದರೂ ಹೇಳತಕ್ಕ ಒಂದು ಅವಕಾಶವಿತ್ತು. ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ವಿರೋಧಪಕ್ಷದ ನಾಯಕರು ನಾವು ಬಹುಶಃ ಒಬ್ಬರನ್ನೊಬ್ಬರು 1969-70ರಿಂದ ಬಲ್ಲೆವು. ಅವರನ್ನು ವಿವಿಧ ಹಂತಗಳಲ್ಲಿ ನಾಯಕನಾಗಿ ಅವರು ತೋರಿಸಿದಂತಹ ಶ್ರದ್ಧೆ ಯಾವ ದಿವಸವೂ ಒಂದು ಕ್ಷಣ ಕೂಡ ಸದನಕ್ಕೆ ಲೇಟಾಗಿ ಬಂದಿಲ್ಲ, ಗೈರುಹಾಜರಾಗಿಲ್ಲ. ಮತ್ತೆ ಬೆಲ್ ಹಾಕಿ ಸದನ ಸೇರಿ ಮತ್ತೆ ನಾನು ಅಡ್ಜರ್ನ್ ಮಾಡಿ ಹೋಗುವವರೆಗೆ ಅವರು ಸದನ ಬಿಟ್ಟು ಹೋಗುತ್ತಿರಲಿಲ್ಲ. ಅಧ್ಯಯನ ಮಾಡಿ ಈ ಸದನಕ್ಕೆ ಬರತಕ್ಕವರು. ಮೊದಲಿಗೆ ಶ್ರೀಮಾನ್ ಯಡಿಯೂರಪ್ಪನವರು ವಿರೋಧಪಕ್ಷದ ನಾಯಕರಾಗಿ ಸ್ವಲ್ಪ ಹಚ್ಚು ಆವೇಶಭರಿತರಾಗಿ ಮಾತನಾಡತಕ್ಕ ಮನುಷ್ಯರು. ಅವರ ಜನಪರವಾದ ಕಳಕಳಿಯನ್ನು ನಾವು ಅನುಮಾನಿಸುವ ಹಾಗೆ ಇಲ್ಲ. ಅವರದು ಒಂದು ವಿಧಾನವಾದರೆ, ಮಾನ್ಯ ಖರ್ಗೆಯವರದು ಒಂದು ವಿಧಾನ. ಅದೇರೀತಿ ಮುಂದಿನ ಸಾಲಿನಲ್ಲಿ ಕುಳಿತುಕೊಳ್ಳತಕ್ಕ ವೀರಪ್ಪಮೊಯಿಲಿಯವರಾಗಬಹುದು, ಧರ್ಮಸಿಂಗ್‌ರವರು ಆಗಬಹುದು, ಸುರೇಶ್‌ರವರು ಆಗಬಹುದು ಅವರು ತಮ್ಮ ತಮ್ಮದೇ ಆದಂತಹ ರೀತಿಯಲ್ಲಿ ಸಹಕರಿಸಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ವೈಯಕ್ತಿಕವಾಗಿ ನನಗೆ

ಬಹಳ ಸಮೀಪ. ಅವರ ನನ್ನ ಸಾಮೀಪ್ಯ ನಮ್ಮಿಬ್ಬರನ್ನು ಮುಜುಗರಕ್ಕೆ ಕೂಡ ಈಡು ಮಾಡಿದೆ. ಕೆಲವು ರೀತಿಯಲ್ಲಿ ಕೆಲವರು ವ್ಯಾಖ್ಯಾನ ಮಾಡುವಂತಹ ರೀತಿಯಲ್ಲಿ ಆಗಿದೆ. ಅವರು ಏನೇ ಮಾಡಬಹುದು ಎಲ್ಲೇ ಇರಬಹುದು, ಒಂದು ಕಡೆಗೆ ಅಭಿಮಾನವಿದ್ದರೆ ಅವರು ಅದನ್ನು ತಮ್ಮದೇ ಆದಂತಹ ವಿಶಿಷ್ಟ ರೀತಿಯಲ್ಲಿ ಅದನ್ನು ಪೋಷಿಸಿಕೊಂಡು ಹೋಗತಕ್ಕ ರೀತಿಯಲ್ಲಿ ವಿಶಿಷ್ಟ ಗುಣ ಅವರಲ್ಲಿದೆ. ಹಿರಿಯರಾದ ನಂಜೇಗೌಡರು ನಾನು ಅವರ ವಿಚಾರಪರತೆಗೆ ಕೆಲವು ವಿಚಾರದಲ್ಲಿ ಅವರ ಬದ್ಧತೆಯನ್ನು ನಾನು ಮೆಚ್ಚುತ್ತೇನೆ. ಅನೇಕ ವಿಚಾರಗಳನ್ನು ವೈಯಕ್ತಿಕವಾಗಿ ಅವರ ಜೊತೆಯಲ್ಲಿ ಚರ್ಚೆ ಮಾಡುವಾಗ ಅವರಿಂದ ನಾನು ಕಲಿತುಕೊಂಡಿದ್ದೇನೆ. ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಒಬ್ಬ ಪಾರ್ಲಿಮಂಟೇರಿಯನ್‌ಗೆ ಇರಬೇಕಾಗಿರತಕ್ಕ ಹಲವು ವಿಚಾರಗಳಲ್ಲಿ ಅವರಿಂದ ನಾನು ಗೈಡೆನ್ಸ್ ತೆಗೆದುಕೊಂಡಿದ್ದೇನೆ. ಶ್ರೀರಾಮರೆಡ್ಡಿಯವರು ಹೊಸಬರು ಕಮ್ಯೂನಿಸ್ಟ್ ಪಾರ್ಟಿಯ ಬ್ಯಾಕ್‌ಗ್ರೌಂಡ್‌ನಿಂದ ಬಂದವರು. ಅವರ ಶಿಸ್ತು ಅವರು ಮಾಡತಕ್ಕ ಅಧ್ಯಯನ ನಮ್ಮ ಪಾರ್ಲಿಮೆಂಟರಿ ಡೆಮಾಕ್ರಸಿಗೆ ಸಂಬಂಧವಿರುವುದಿಲ್ಲ. ಅಲ್ಲಿಂದ ಅವರು ಇಲ್ಲಿಗೆ ಬಂದು ಮತ್ತೆ ಹೊಸದಾಗಿ ಎಲಿಮೆಂಟರಿ ಕ್ಲಾಸ್ ಪ್ರಾರಂಭ ಮಾಡಬೇಕಾಗಿದೆ. ಆದರೆ ಬಹಳ ಬೇಗ ಒಗ್ಗಿಕೊಂಡರು. ಮಾನ್ಯ ಪುಟ್ಟಣ್ಣಯ್ಯನವರು ತಮ್ಮದೇ ಆದಂತಹ ಒಂದು ವಿಶಿಷ್ಟಶೈಲಿ. ಯಾವುದೇ ವಿಚಾರವನ್ನು ಮಂಡಿಸತಕ್ಕ ಚೈತನ್ಯ ಉಂಟು. ಅದು ಗ್ರಾಮೀಣಶೈಲಿಯಲ್ಲಿ ಎಷ್ಟು ಪರಿಣಾಮಕಾರಿಯಾಗಿರುತ್ತೆ ಅವರ ಮಾತು ಕೆಲವು ಸಲ ಅಂದರೆ ಲಜ್ಜೆ ಇದ್ದವರಿಗೆ ಮಾತ್ರ ಅವರ ಮಾತು ಅರ್ಥವಾಗುತ್ತದೆ. ನಿರ್ಲಜ್ಜಿತರಿಗೆ ಅವರ ಭಾಷೆ ಅರ್ಥವಾಗುವುದಿಲ್ಲ. ರಾಜೇಂದ್ರನ್‌ರವರು ನನಗೆ ಬಹಳ ಸಂತೋಷ, ಅವರ ಕೈಯಲ್ಲಿ ಮಾತನಾಡಿರುವಂತಹ ಜವಾಬ್ದಾರಿ ನನ್ನ ಮೇಲಿತ್ತು. ಭಾಷೆಯ ಸಮಸ್ಯೆ ಇದ್ದರೂ ಕೂಡ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಅವರಿಗೆ ಯಾವ ಸಮಸ್ಯೆನೂ ಉಂಟಾಗಲಿಲ್ಲ. ಅದೇ ರೀತಿ ಹಷ್ಮಿಯವರು, ನಾನು ಹಷ್ಮಿ ರಾಜೇಂದ್ರನ್ ಇವರ ಹತ್ತಿರವೆಲ್ಲ ಇಲ್ಲಿ ಬಿಟ್ಟು ಹೊರಗೆ ಮಾತನಾಡುವಾಗ ನನ್ನ ಮನೆಯ ಹುಡುಗರ ಜೊತೆ ನನ್ನ ಅಣ್ಣತಮ್ಮಂದಿರ ಜೊತೆಯಲ್ಲಿ ಮಾತನಾಡಿದಂತಹ ಭಾವನೆ ಬರುತ್ತಿತ್ತು. ಅವರನ್ನು ಏಕವಚನದಲ್ಲಿ ಬಹಳ ಸಲುಗೆಯಿಂದ ಮಾತನಾಡುತ್ತಿದ್ದೆನೆ, ಹೊರತು ಅವರನ್ನು ಸದಸ್ಯರೆಂದು ಕೂಡ ನಾನು ನೋಡುತ್ತಿರಲಿಲ್ಲ. ನಾನು ಅವರಲ್ಲಿ ಇಟ್ಟಂತಹ ವಿಶ್ವಾಸಕ್ಕೆ ಅವರೆಲ್ಲರೂ ಕೂಡ ಎಂದೂ ನನಗೆ ದ್ರೋಹ ಮಾಡಲಿಲ್ಲ. ಅನೇಕ ಜನ ಮಾನ್ಯ ಸದಸ್ಯರು ವಿರೋಧಪಕ್ಷದಲ್ಲಿ ಹೆಸರುಗಳನ್ನು ಹೇಳುತ್ತಾ ಹೋದರೆ ಬಹಳ ಸಮಯವಾಗುತ್ತದೆ. ತಮ್ಮ ತಮ್ಮದೇ ಆದಂತಹ ರೀತಿಯಲ್ಲಿ ಒಂದೊಂದು ದಿವಸ ಕಳೆದಂತೆಲ್ಲಾ ಹೊರಗೆ ಬರುತ್ತಿದ್ದರು. ತಮ್ಮ ಒಳಗಿನ ಅಂತಃಕರಣವನ್ನು ಮೂಡಿಸಿಕೊಂಡು ತಮ್ಮ ಶಕ್ತಿ, ಪ್ರತಿಭೆಯನ್ನು ತೋರಿಸಿಕೊಂಡು ಹೊರಗೆ ಬರುತ್ತಿದ್ದರು. ನಾನು ಸಂತೋಷ ಪಡುತ್ತಿದ್ದೆ. ಮಾನ್ಯ ರೇವುನಾಯಕ್ ಬೆಳಮಗಿಯವರು ಒಂದು ದಿವಸ ನನ್ನ ಛೇಂಬರ್ಸ್‌ಗೆ ಬಂದು ನನ್ನ ಕ್ಷೇತ್ರದಲ್ಲಿ ಒಂದು ಸಮಸ್ಯೆಯಿದೆ ಎಂದು ಹಳಿ ಕಣ್ಣೀರು ಇಟ್ಟರು. ಅವರು ಏನು ತಿಳಿದುಕೊಂಡಿದ್ದರು ಅಂದರೆ, ನಾನು ಇಲ್ಲಿ ಕುಳಿತುಕೊಳ್ಳುವುದರಿಂದ ನಾನೇ ಬಹಳ ದೊಡ್ಡವನು ಈ ರಾಜ್ಯದಲ್ಲಿ ಎಂದು, ನೀವು ಏನಾದರೂ ಮಾಡಬೇಕೆಂದು ಹೇಳಿ ನನ್ನನ್ನು ಅವರು ಕಾಲು ಮುಟ್ಟಿ ನಮಸ್ಕರಿಸುವುದಕ್ಕೆ ಬಂದರು. ನಾನು ಆಗ ಹೇಳಿದೆ ನೀವು ಹಾಗೆಲ್ಲ ಮಾಡಕೂಡದು, ನೀವು ಈ ಸದನದ ಸದಸ್ಯರು ನೀವು ಪ್ರಶ್ನೆ ಕೇಳಿ ನಾನು ಉತ್ತರ ಕೊಡಿಸುತ್ತೇನೆಂದು

ಹೇಳಿದೆ. ಅವರಿಗೆ ಪ್ರಾಕ್ಟೀಸ್ ಮಾಡಿಸಿದೆ. ಅವರ ಧೈರ್ಯ ಎಲ್ಲಿಗೆ ಹೋಯಿತು ಅಂದರೆ ಅವರ ಕ್ಷೇತ್ರದಲ್ಲಿ ಏನಾದರೂ ಕೆಲಸ, ಆಗಬೇಕಾದರೆ ನಾನು ಧರಣಿ ಮಾಡುತ್ತೇನೆಂದು ಹೇಳಿ ಬಾವಿಯೊಳಗೆ ಬರುವ ಮಟ್ಟಕ್ಕೆ ಹೋಯಿತು. ನನಗೆ ಬಹಳ ಸಂತೋಷವಾಯಿತು. ಜನ ಪ್ರತಿನಿಧಿಗಳಾಗಿ ಈ ಸದನಕ್ಕೆ ಆರಿಸಿ ಬರತಕ್ಕವರಿಗೆ ವಿಶೇಷವಾಗಿ ಅಂತಹ ಬ್ಯಾಕ್‌ಗ್ರೌಂಡ್‌ನಿಂದ ಬರತಕ್ಕವರಿಗೆ ಅವರ ಜನರ ಬಗ್ಗೆ ಮಾತನಾಡತಕ್ಕ ಧೈರ್ಯ ಬಂದದ್ದೆ ನಮ್ಮ ಸಾಧನೆ ಎಂದು ಹೇಳಬೇಕು. ಭಾಷಣ ಮಾಡುವಾಗ ನಾವು ಎಷ್ಟು ಸುಂದರವಾಗಿ ಮಾತನಾಡುತ್ತೇವೆ ಎನ್ನುವುದು ಮುಖ್ಯವಲ್ಲ. ಆ ಮಾತಿನ ಹಿಂದೆ ಏನಾದರೂ ಭಾವುಕತೆ ಇದೆಯಾ ಮಾನವೀಯತೆ ಇದೆಯಾ ಅದರಲ್ಲಿ ಏನಾದರೂ ಬದ್ಧತೆ ಇದೆಯಾ ಅಷ್ಟೆ ನಾವು ಪರಿಗಣಿಸಬೇಕು. ಮಾಧುಸ್ವಾಮಿಯವರು, ಬಹುಶಃ ಮುಂದಿನ ದಿನಗಳಲ್ಲಿ ಎಲ್ಲ ಒಳ್ಳೆಯದಾಗಿ ಚೆನ್ನಾಗಿ ಆದರೆ ಬಹಳ ಉತ್ತಮ ವಾಗ್ಮಿಯಾಗಿ ಅವರು ಹೊರಗೆ ಬರುತ್ತಾರೆ. ಪಾರ್ಲಿಮೆಂಟೀರಿಯನ್ ಆಗಿ ಹೊರಗೆ ಬರುತ್ತಾರೆ. ಇನ್ನು ಸ್ವಲ್ಪ ಹೆಚ್ಚು ಅಭ್ಯಾಸ ಮಾಡಿದರೆ ಅವರಿಗೆ ಇನ್ನೂ ಅನುಕೂಲವಾಗುತ್ತದೆಂದು ನನ್ನ ಭಾವನೆ. ಮಾನ್ಯ ಸಗೀರ್‌ರವರು ಹೇಳಿದರು, ನನಗೆ ಕನ್ನಡದಲ್ಲಿ ಮಾತನಾಡುವುದಕ್ಕೆ ತೊಂದರೆಯಾಗುತ್ತದೆಂದು. ಏನೂ ಇಲ್ಲ ಎಷ್ಟೋ ಜನ ಕನ್ನಡ ಮಾತೃಭಾಷೆಯಾಗಿರತಕ್ಕವರಿಗಿಂತ ನಿಮ್ಮ ಕನ್ನಡ ಉತ್ತಮವೆಂದು ಹೇಳಿದೆ. ಏನೂ ತೊಂದರೆಯಿಲ್ಲವೆಂದು ಹೇಳಿದೆ.

8.00 ಪಿ.ಎಂ

ಅನೇಕ ಜನ ಸದಸ್ಯರು ಮತ್ತು ಮಂತ್ರಿಮಂಡಲದ ಸದಸ್ಯರ ಬಗ್ಗೆ ನಾನು ಹೇಳಬೇಕಾಗಿದ್ದರೆ, ಕಡೆಯದಾಗಿ, ತಾವು ಸ್ವಲ್ಪ ಕಠಿಣವಾಗಿ ಹೇಳಿಬಿಟ್ಟಿರಿ, ನನಗೆ ಸ್ವಲ್ಪ ಮುಜುಗರವಾಯಿತು. ಉತ್ತಮರು ಇದ್ದಾರೆ, ತಿಳಿಯಲಾರದವರು ಇದ್ದಾರೆ, ಸಹಕರಿಸಿಕೊಂಡು ಹೋದವರು ಇದ್ದಾರೆ. ಹಿರಿಯ ಸಚಿವರಾದಂಥ ಮಂಜುನಾಥ್‌ರವರು ಬಂದು ಕುಳಿತರೆ, ಯಾರಾದರೂ ಅವರನ್ನು ಆ ಕುರ್ಚಿಯಿಂದ ಬಿಡಿಸಬೇಕು ಅಷ್ಟೆ. ಅಷ್ಟು ಶ್ರದ್ಧೆಯಿಂದ ಕುರ್ಚಿಯಲ್ಲಿ ಕುಳಿತುಕೊಳ್ಳತಕ್ಕಂಥ ಅಭ್ಯಾಸ. ಅನೇಕ ಸಂದರ್ಭಗಳಲ್ಲಿ ಪ್ರಕಾಶ್‌ರವರನ್ನು, ನೀವು ನನ್ನ ನೆರವಿಗೆ ಬರುವುದಿಲ್ಲವೇ ಎಂದು ಅನೇಕ ಸಲ ಇಲ್ಲಿಂದ ನನ್ನ ಬೇಸರವನ್ನು ವ್ಯಕ್ತಪಡಿಸಿದ್ದೇನೆ. ಬೈರೇಗೌಡರು, ನಾನು ಮಂತ್ರಿಯೆಂಬುದನ್ನೇ ಮರೆತು ವಿರೋಧ ಪಕ್ಷದ ನಾಯಕರಾಗಿ ಬಿಡುತ್ತಿದ್ದರು. ಆ ಸೀರಿಯಸೆನೆಸ್ ಆ ರೀತಿ ಇರುತ್ತಾ ಇರುತ್ತಿತ್ತು. ನಾಗೇಗೌಡರು ಹೇಳಿದಂತೆ, ಅವರು ನನ್ನ ಅತ್ಯಂತ ಹಳೆಯ ಸ್ನೇಹಿತರು. ಗೋವಿಂದೇಗೌಡರನ್ನು ಅನೇಕ ಸಂದರ್ಭಗಳಲ್ಲಿ ಈ ಸದನದಲ್ಲಿ ಮುಕ್ತಕಂಠದಿಂದ ಪ್ರಶಂಸೆ ಮಾಡಿದ್ದೇನೆ. ಬಚ್ಚೇಗೌಡರು ನನ್ನದು ಒಂದು ರೀತಿಯ ವಿಶಿಷ್ಟವಾದಂಥ ವೈಯಕ್ತಿಕ ಸಂಬಂಧ. ಒಬ್ಬರೊಬ್ಬರದೂ ಹಾಗೆಯೇ. ನಾಣಯ್ಯನವರ ಬಗ್ಗೆ ನಾನೇನೂ ಹೇಳುವುದಕ್ಕೆ ಹೋಗುವುದಿಲ್ಲ. ಕಾರಣ ಇಷ್ಟೆ, ನಾವು ಬಹಳ ಆತ್ಮೀಯರಾದುದರಿಂದ ಅವರಿಗೂ ಮುಜುಗರವಾಗುತ್ತದೆ, ನನಗೂ ಮುಜುಗರವಾಗುತ್ತದೆ. ನಾಣಯ್ಯನವರು, ದಿವಂಗತ ನಜೀರ್‌ಸಾಬ್‌ರವರು, ಬಿ.ಎ. ಮೊಯಿದ್ದೀನ್‌ರವರು ನಾನು ಮತ್ತು ಇನ್ನೂ ಕೆಲವರು ಅತ್ಯಂತ ಆತಂಕದ ಘಳಿಗೆಗಳನ್ನು ನಮ್ಮಲ್ಲಿ ನಾವೇ ಹಂಚಿಕೊಂಡಿದ್ದೇವೆ. ಇದು ಯಾವುದೂ ನಿಮಗೆ ಗೊತ್ತಿಲ್ಲ ಎಂಬುದಿಲ್ಲ. ಎಲ್ಲಾ ನಿಮಗೆ ಗೊತ್ತಿದೆ. ನಾನು ಅವರ ಬಗ್ಗೆ ಮಾತನಾಡುವುದಕ್ಕೆ ಪ್ರಯತ್ನಪಟ್ಟಾಗ ನನಗೆ

ನಜೀರ್ ಸಾಹೇಬರದು ನೆನಪಾಗುತ್ತದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಬಹಳ ಅದೃಷ್ಟಶಾಲಿ ರಾಜಕಾರಣಿ. ಬಹುಶಃ ಇತ್ತೀಚಿನ ದಿನಗಳಲ್ಲಿ 5 ಬಜೆಟ್‌ಗಳನ್ನು ಮಂಡನೆ ಮಾಡತಕ್ಕ ಅವಕಾಶ ಯಾರಿಗೂ ಸಿಕ್ಕಿರಲಿಲ್ಲ. ಬಹಳ ನಿಷ್ಪೂರವಾಗಿ ಮಾತನಾಡತಕ್ಕ ಸ್ವಭಾವ. ಯಾವುದೇ ಒಂದು ವಿಚಾರ ಬಂದಾಗ, ತಾನು ಏನು ನಂಬಿರುತ್ತಾನೆ, ಆ ಒಂದು ವಿಚಾರವನ್ನು ಬಹಳ ಸ್ಪಷ್ಟವಾಗಿ, ಬಹಳ ನಿಷ್ಪೂರವಾಗಿ ವಾದ ಮಾಡತಕ್ಕಂಥ ಅಭ್ಯಾಸ. ಎಷ್ಟೇ ಸಲಿಗೆ ಇದ್ದರೂ ಕೂಡ ತನ್ನ ಕರ್ತವ್ಯ ನಿರ್ವಹಣೆ ಬಂದಾಗ ಅತ್ಯಂತ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಾರೆ. ಅನೇಕ ಜನ ಸಚಿವರು, ಜಿಲ್ಲೆಯ ಮಟ್ಟಿಗೆ ಭೈರೇಗೌಡರು ಮತ್ತು ಕೃಷ್ಣಾರೆಡ್ಡಿಯವರು ನನ್ನ ಜೊತೆಗೆ ಸಹಕರಿಸದೇ ಇದ್ದರೆ ನಾನು ಇಷ್ಟು ನೆಮ್ಮದಿಯಿಂದ ಬೆಂಗಳೂರಿನಲ್ಲಿ ಕುಳಿತುಕೊಂಡು ನಾನು ಈ ಕೆಲಸವನ್ನು ನಿರ್ವಹಣೆ ಮಾಡುವುದಕ್ಕೆ ಆಗುತ್ತಾ ಇರಲಿಲ್ಲ. ಇನ್ನು ನನ್ನ ಉಪಾಧ್ಯಕ್ಷರು, ಮೊದಲನೆಯದಾಗಿ ಎಂ.ಎಸ್. ಪಾಟೀಲರು. ತದನಂತರ ಬಂದ ದಿವಂಗತ ಮಾಮನಿಯವರು. ಈಗಿರತಕ್ಕಂಥ ದೇಶಮುಖ್‌ರವರು. ನನಗೆ ಸಂಪೂರ್ಣ ಸಹಕಾರವನ್ನು ಕೊಟ್ಟಿದ್ದಾರೆ. ಎಂ.ಎಸ್. ಪಾಟೀಲರು ಈಗಲೂ ಕೂಡ ನನ್ನ ಎದುರಿಗೆ ಬಂದರೆ ಮಾಜಿ ಉಪಾಧ್ಯಕ್ಷರೆಂದೇ ನಾನು ಸಂಭೋದನೆ ಮಾಡುತ್ತೇನೆ. ಮಾಮನಿಯವರನ್ನು ನಾನು ನೆನಪು ಮಾಡಿಕೊಳ್ಳಬೇಕು. ಅವರದು ಒಂದು ರೀತಿಯ ಸ್ವಭಾವ. ಒಂದು ದಿವಸ ನಾನು ಚೇಂಬರಿನಲ್ಲಿ ಕುಳಿತಿದ್ದೆ. ಅವರನ್ನು ಇಲ್ಲಿ ಕುಳಿತುಕೊಳ್ಳಿ ಎಂದು ಹೇಳಿದ್ದೆ. ಸ್ವಲ್ಪ ಗಲಾಟೆಯಾದ ಹಾಗೆ ಆಯಿತು. ನಾನು ಯಾರ ಕೈಲೋ ಹೇಳಿಸಿ ಓಡಿ ಬಂದೆ; ನಿಧಾನವಾಗಿ ಕೂಡ ಬರಲಿಲ್ಲ. ಅವರಿಗೆ ಸ್ವಲ್ಪ ಸೀಟಲ್ಲಿ ಕೂಡಲಿಕ್ಕೆ ಹೇಳಿ, ನಾನು ಬರುತ್ತಾ ಇದ್ದೇನೆ ಎಂದು. ನಾನು ಬರುವ ಹೊತ್ತಿಗೆ, ಅವರು ಪಂಚೆ ಕೈಯಲ್ಲಿ ಹಿಡಿದುಕೊಂಡು ಎದುರುಗಡೆ ಬಂದರು. ಏನು ಉಪಾಧ್ಯಕ್ಷರೇ, ಏಕೆ ಹೀಗೆ ಮಾಡಿದಿರಿ ಎಂದು ಕೇಳಿದೆ. ಏನು ಸಾರ್ ನೀವಿದ್ದರೆ ಸುಮ್ಮನೆ ಕುಳಿತಿರುತ್ತಾರೆ, ಇಲ್ಲದೇಹೋದರೆ ಬಡಿದುಕೊಳ್ಳುತ್ತಾರೆ, ಅದಕ್ಕೆ ಎಲ್ಲಾ ಹೋಗಿ ಎಂದು ಹೇಳಿದರು ನಾನು ಬಂದುಬಿಟ್ಟೆ ಎಂದು ಹೇಳಿದರು. ಇದು ಅವರ ಭಾಷೆ. ಅಗೌರವ ಸೂಚಿಸಬೇಕೆಂದಲ್ಲ. ಬಹಳ ನೇರವಾಗಿ ಮಾತನಾಡತಕ್ಕಂಥ ಸ್ವಭಾವದವರು. ಇನ್ನು ಮಹಿಳಾ ಸದಸ್ಯರೆಲ್ಲರಿಗೂ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕಾಗಲಿಲ್ಲ. ಬಹಳ ಜನ ಮಾತನಾಡುವುದಕ್ಕೆ ಅಪೇಕ್ಷೆ ಪಟ್ಟಿದ್ದರು. ತಮ್ಮದೇ ಆದಂಥ ಸಮಸ್ಯೆಗಳು ಇದ್ದಾಗ ಬಂದು ಕಾಣತಕ್ಕಂಥಾದ್ದು, ಗೌರವದಿಂದ ನಮ್ಮನ್ನು ನೋಡತಕ್ಕಂಥಾದ್ದು, ಸಮಸ್ಯೆಗಳು ಇದ್ದಾಗ ಬಂದು ಚರ್ಚೆ ಮಾಡತಕ್ಕಂಥಾದ್ದು ಮಾಡಿದ್ದಾರೆ ಅವರಿಗೆ ನಾನು ಪ್ರತ್ಯೇಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಕಳೆದ ನಾಲ್ಕೂವರೆ ವರ್ಷಗಳಲ್ಲಿ ನಾವು ಕೆಲವು ವಿಚಾರಗಳಲ್ಲಿ ಅಂದರೆ ಲೆಜಿಸ್ಲೇಚರ್ ಪರವಾಗಿ ಪ್ರಗತಿ ಸಾಧಿಸುವುದಕ್ಕೆ ಸಾಧ್ಯವಾಯಿತು. ಮೊದಲನೆಯದಾಗಿ ದಕ್ಷಿಣ ರಾಜ್ಯಗಳ ಎಲ್ಲಾ ಶಾಸಕರುಗಳ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಮಾಡಿದೆವು. ಅದೊಂದು ದೊಡ್ಡ ಸಮಾರಂಭವೇ ಆಯಿತು. ಎಂ.ಆರ್.ಐ.ಎಸ್.ನಿಂದ ಮೊದಲುಗೊಂಡು ಎಲ್ಲಾ ಮಾಜಿ ಶಾಸಕರುಗಳನ್ನು ಕರೆಸಿದೆವು. ಬಹಳ ಜನರಿಗೆ ಇದಕ್ಕಾಗಿ ನಾವು ಕೋಟ್ಯಾಂತರ ರೂಪಾಯಿ ಖರ್ಚುಮಾಡಿದೆವು ಎಂಬ ಭಾವನೆ ಇದೆ. ಆದರೆ, ಅಷ್ಟೊಂದು ಹಣ ಖರ್ಚು ಮಾಡಲಿಲ್ಲ. ಲೆಜಿಸ್ಲೇಚರ್‌ನಿಂದ ಖರ್ಚಾಗಿದ್ದು ಕೆಲವು ಲಕ್ಷ ರೂಪಾಯಿಗಳು ಅಷ್ಟೆ. ಉಳಿದುದನ್ನು ಅವರಿವರ ಕೈಲಿ ಸ್ಪಾನ್ಸರ್ ಮಾಡಿಸಿ, ಮಾಡಲಾಯಿತು.

ತದನಂತರ ದಕ್ಷಿಣ ರಾಜ್ಯಗಳ ಶಾಸಕರುಗಳ ಕ್ರೀಡಾ ಸಮಾವೇಶವನ್ನು ಆಂಧ್ರದವರು ಮಾಡಿದರು, ನಾವು ಅದನ್ನು ಮುಂದುವರಿಸುವುದಕ್ಕಾಗಲಿಲ್ಲ. ಶಾಸಕರ ಭವನಕ್ಕೆ ನಾನು ಮತ್ತು ಮೇಲ್ಮನೆಯ ಸಭಾಪತಿಗಳು ಒಂದು ಸಲ ತನಿಖೆ ಮಾಡುವುದಕ್ಕೆ ಹೋದಾಗ, ಶಾಸಕರುಗಳ ರೂಮುಗಳನ್ನು ನೋಡಿ, ಸಭಾಪತಿಗಳಿಗೆ ಹೇಳಿದೆ. ಇಷ್ಟು ಕಡಿಮೆ ಜಾಗದಲ್ಲಿ ಅವರು ಪುಸ್ತಕ ಎಲ್ಲಿಟ್ಟುಕೊಳ್ಳಬೇಕು. ವಿಸಿಟರ್ಸ್ ಎಲ್ಲಿ ಕುಳಿತುಕೊಳ್ಳಬೇಕು. ಒಂದುವೇಳೆ ಅವರ ಮನೆಯವರು ಬಂದರೆ, ಅವರೆಲ್ಲಿರಬೇಕು. ಬಹಳ ಇಕ್ಕಟ್ಟಾಗುತ್ತದೆ, ಸ್ವಲ್ಪವಾದರೂ ನಾವು ಸ್ಥಳಾವಕಾಶ ಮಾಡೋಣ. ತಮಗೆ ಮತ್ತು ನನಗೆ ಅಷ್ಟು ದೊಡ್ಡ ಮನೆ ಕೊಟ್ಟಿದ್ದಾರೆ. ನಾವು ಅಷ್ಟು ದೊಡ್ಡ ಮನೆಯಲ್ಲಿದ್ದು, ಶಾಸಕರುಗಳಿಗೆ ಈ ರೀತಿ ಮಾಡುವುದು ಸರಿಹೋಗುವುದಿಲ್ಲವೆಂದು ಹೇಳಿದೆ. ಅದಕ್ಕೆ ಅವರೂ ಒಪ್ಪಿದರು, ಕೆಲವು ಕೊಠಡಿಗಳನ್ನು ವಿಸ್ತರಣೆ ಮಾಡಿದೆವು. ಒಂದೊಂದು ರೂಮಿಗೆ 25 ಸಾವಿರ ಮಾತ್ರ ಖರ್ಚು ಮಾಡಿದೆವು. ನಾವೇನು ಈ ಕೆಲಸಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಲಿಲ್ಲ. ಕೆಲವು ಕೊಠಡಿಗಳನ್ನು ಮತ್ತೆ ಹೊಸದಾಗಿ ಮಾಡಿದೆವು. ನಾನು ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಸ್ಮರಿಸಿಕೊಳ್ಳಬೇಕು. ನಾವು ಹೊಸದಾಗಿ ಕೆಲವು ಕೊಠಡಿಗಳನ್ನು ಕಟ್ಟಬೇಕೆಂದಾಗ, ಅವರು ಸಹಕಾರ ಕೊಟ್ಟರು. ಹೆಲ್ತ್ ಕ್ಲಬ್ ಮಾಡಿದಾಗಲೂ ಕೂಡ ಅಷ್ಟೆ. ಕೆಲವರು ಅದನ್ನು ಮೆಚ್ಚಿದರು, ಕೆಲವರು ಅದರ ಬಗ್ಗೆ ವ್ಯಾಖ್ಯಾನ ಮಾಡಿದರು. ನನ್ನ ಉದ್ದೇಶ ಇದ್ದುದು ಇಷ್ಟೆ. ಅಧಿವೇಶನ ನಡೆಯುವಾಗ, ಸಮಿತಿಯ ಸಭೆಗಳಿಗೆ ಬಂದಾಗ ಡಯಾಬಿಟಿಸ್ ಪೇಷೆಂಟ್ಸ್ ಇರುತ್ತಾರೆ, ಮತ್ತೆ ಕೆಲವರಿಗೆ ವಾಕಿಂಗ್ ಮಾಡತಕ್ಕಂಥಾದ್ದು ಸಣ್ಣಪುಟ್ಟ ಎಕ್ಸರ್‌ಸೈಜ್ ಮಾಡತಕ್ಕಂಥಾದ್ದು ಅದಕ್ಕೆ ಒಂದು ಅವಕಾಶ ಇರಲಿ ಎಂದು ಮಾಡಿದೆವು. ಅದಕ್ಕೂ ಕೂಡ ನಾವು ಎಲ್ಲಾ ಸೇರಿ ಖರ್ಚು ಮಾಡಿರತಕ್ಕಂತಾದ್ದು ಒಂದು ಲಕ್ಷ ರೂಪಾಯಿ ಒಳಗಡೆಯೆ ಅದಕ್ಕಿಂತ ಜಾಸ್ತಿ ಹಣವನ್ನೇನು ಖರ್ಚು ಮಾಡಿಲ್ಲ, ಇದ್ದ ಜಾಗದಲ್ಲಿಯೇ ಮಾಡಿದೆವು. ಹೆಲ್ತ್‌ಕ್ಲಬ್ ಎಂದು ಅದಕ್ಕೆ ಹೆಸರಿಟ್ಟು ಮಾಡಿದ್ದೇವೆ. ಕೆಲವರು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ, ಕೆಲವರು ಉಪಯೋಗಿಸುವುದಿಲ್ಲ. ಶಾಶ್ವತವಾಗಿ ನಮ್ಮ ಶಾಸಕರು ಅಥವಾ ಮಾಜಿ ಶಾಸಕರು ಯಾರು ಇರುತ್ತಾರೆ ಅವರ ಉಪಯೋಗಕ್ಕೆ ಮಾಡಿದ್ದೇವೆ. ಮತ್ತೆ ಶಾಸಕರಿಗೆ ಆಪ್ತ ಸಹಾಯಕರು ಬೇಕು ಎಂಬ ವಿಚಾರ ಬಂತು. ಪ್ರಾರಂಭದಲ್ಲಿ ಇವರನ್ನು ಎಲ್ಲಿಂದ ತರುವುದು, ಯಾರು ಸಂಬಳ ಕೊಡುವುದು ಎಂದು ಎಲ್ಲರೂ ತಿಳಿದುಕೊಂಡಿದ್ದರು. ನನ್ನ ಮನಸ್ಸಿನಲ್ಲಿದ್ದ ಇಡೀ ಉದ್ದೇಶವನ್ನು ಸರ್ಕಾರಕ್ಕೆ ತಿಳಿಸಿ ಹೇಳಿದಮೇಲೆ, ಸರ್ಕಾರಿ ನೌಕರಿಯಲ್ಲೇ ಇರತಕ್ಕಂಥವರು, ಯಾರು ಅವರನ್ನು ಅಪೇಕ್ಷೆ ಪಡುತ್ತಾರೆ ಅಂತಹವರನ್ನು ತೆಗೆದುಕೊಳ್ಳಬಹುದು, ಹೊಸದಾಗಿ ನಾವು ಸಂಬಳ ಕೊಡತಕ್ಕಂಥಾದ್ದೇನೂ ಇರುವುದಿಲ್ಲ. ಅವರಿಗಾಗಿ ನಾವು ಹೆಚ್ಚಿಗೆ ಕೊಡಬೇಕಾದ್ದು ಏನೂ ಇರುವುದಿಲ್ಲ. ಶಾಸಕರ ಅವಧಿ ಮುಗಿದ ತಕ್ಷಣ ಅವರು ಅವರ ಪೇರೆಂಟ್ ಡಿಪಾರ್ಟಮೆಂಟಿಗೆ ಹೋಗುತ್ತಾರೆ ಎಂದು ಹೇಳಿದೆ. ಸರ್ಕಾರದವರು ದೊಡ್ಡಮನಸ್ಸು ಮಾಡಿ, ಈ ಹೊಸ ಪದ್ಧತಿಯನ್ನು ಜಾರಿಗೆ ತಂದರು. ಅನೇಕ ಜನರು ಇದರ ಸದುಪಯೋಗ ಮಾಡಿಕೊಂಡರು. ಉಳಿದುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಹೆಜ್ಜೆಯನ್ನು ನಾವು ಹೊಸದಾಗಿ ಇಟ್ಟಾಗ, ಅದರ ಫಲಿತಾಂಶ ಸಿಗುವುದಕ್ಕೆ ಸ್ವಲ್ಪ ಸಮಯ, ಬಹುಶಃ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಪ್ರಯೋಜನ ಪಡೆದುಕೊಳ್ಳುತ್ತಾರೆಂಬ ವಿಶ್ವಾಸವನ್ನೂ ಹೊಂದಿರುತ್ತೇನೆ.

ಅದೇರೀತಿಯಲ್ಲಿ ಶಾಸಕರಿಗೆ ಕೊಡತಕ್ಕ ಸಾರಿಗೆ ಭತ್ಯೆ ಮತ್ತು ಸಂಬಳವನ್ನು ಕೂಡ ನಾವು ಹೆಚ್ಚಿಗೆ ಮಾಡಿದ್ದೇವೆ. ಪತ್ರಿಕಾ ಗೆಳೆಯರು ವ್ಯಾಖ್ಯಾನ ಕೂಡ ಮಾಡಿದರು. ಇಂತಹ ವಿಚಾರ ಬಂದಾಗ, ಚರ್ಚೆ, ಗಲಾಟೆ ಏನೂ ಇಲ್ಲದೆ ಸರ್ವಾನುಮತದಿಂದ ಇವರು ಪಾಸ್ ಮಾಡಿಕೊಂಡರು ಎಂದು. ನಿಜ ಕೆಲವು ಸಲ ನಮ್ಮಲ್ಲಿ ರೀತಿ ಇರಬೇಕು, ನಾನೇನು ಅದರ ಬಗ್ಗೆ ಮುಜುಗರ ಪಡುವುದಿಲ್ಲ. ಕೆಟ್ಟವರು ಎಲ್ಲಾ ಕ್ಷೇತ್ರಗಳಲ್ಲೂ ಇರುತ್ತಾರೆ, ಪ್ರಾಮಾಣಿಕವಾಗಿ ಶಾಸನ ಸಭೆಯ ಸದಸ್ಯತ್ವವನ್ನು ನಡೆಸಿಕೊಂಡು ಹೋಗಬೇಕೆನ್ನುವವರಿಗೆ ಅದರ ಕಷ್ಟ ಎಷ್ಟೆಂದು ಗೊತ್ತಾಗುತ್ತದೆ. ವ್ಯಾಖ್ಯಾನ ಮಾಡತಕ್ಕಂಥವರು ಒಂದು ಸಲ ಚುನಾವಣೆಗೆ ನಿಂತರೆ, ಆರಿಸಿ ಬಂದರೆ ಅವರಿಗೆ ಇದೆಲ್ಲದರ ಪರಿಚಯವಾಗುತ್ತದೆ. ಇಷ್ಟನ್ನು ಮಾತ್ರ ನಾನು ಹೇಳುತ್ತೇನೆ. ಲೈಬ್ರರಿ ಮುಖಾಂತರ ಶ್ರೀಮಾನ್ ಬಿ.ಬಿ. ಶಿವಪ್ಪನವರಿಗೆ ನಾವು ಜವಾಬ್ದಾರಿ ಕೊಟ್ಟಿದ್ದೇವೆ. ಯಾರು ನಮ್ಮ ರಾಷ್ಟ್ರದ ಪ್ರತಿಭಾವಂತ ನಾಯಕರಿದ್ದಾರೆ ಪಾರ್ಲಿಮೆಂಟಿನಲ್ಲಿ, ರಾಜ್ಯಸಭೆಯಲ್ಲಿ ಅವರು ಮಾಡಿರತಕ್ಕಂಥ ಮಹತ್ವವಾದ ಭಾಷಣಗಳು, ರಾಜ್ಯದ ವಿಧಾನಸಭೆಯಲ್ಲಿ ಮತ್ತು ವಿಧಾನ ಪರಿಷತ್ತಿನಲ್ಲಿ ಅದೇ ರೀತಿ ಯಾರು ಯಾರು ಕಳೆದ 40-45 ವರ್ಷಗಳಲ್ಲಿ ಜನೋಪಯೋಗಿ ಮಾತುಗಳನ್ನಾಡಿದ್ದಾರೆ, ರಚನಾತ್ಮಕವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ, ನಾವು ಮರೆಯುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಂಥ ಘಟನೆಗಳು ನಡೆದಿವೆ, ಇವುಗಳನ್ನು ಒಳಗೊಂಡು ಕೆಲವು ಕೃತಿಗಳನ್ನು ತರಬೇಕೆಂದು ಪ್ರಯತ್ನ ಮಾಡಿದೆವು. ಒಂದು ಕಂತನ್ನು ಬಿಡುಗಡೆ ಮಾಡಿದೆವು. ಈಗ ಲೈಬ್ರರಿಗೆ ಇನ್ನೂ ಹೆಚ್ಚಿನ ಸೌಲಭ್ಯ ಕೊಟ್ಟು, ಲೈಬ್ರರಿ ಕಮಿಟಿ ಏನಿದೆ, ಅವರು ಈ ಕೆಲಸದಲ್ಲಿ ತೊಡಗಿಸಬೇಕೆಂಬ ಒಂದು ಪ್ರಯತ್ನವನ್ನು ಮಾಡಿದ್ದೇವೆ.

ಇನ್ನು ವಿಷಯ ಸಮಿತಿಗಳನ್ನು ನಾವು ಅನಿವಾರ್ಯವಾಗಿ ರದ್ದು ಮಾಡಿದೆವು. ನನ್ನ ಮನಸ್ಸಿಗೆ ನೋವಾದಂಥ ಕೆಲಸಗಳಲ್ಲಿ ಇದೂ ಒಂದು. ಆದರೆ, ಮಾನ್ಯ ಸ್ನೇಹಿತರುಗಳು ಸಹಕಾರ ಕೊಟ್ಟಿದ್ದರೆ, ವಿಷಯ ಸಮಿತಿಗಳು ರದ್ದಾಗುತ್ತಿರಲಿಲ್ಲ. ವಿಷಯ ಸಮಿತಿಗಳನ್ನು ಯಾವರೀತಿ ಉಪಯೋಗ ಮಾಡಿಕೊಳ್ಳಬೇಕೆಂಬ ವಿಚಾರದಲ್ಲಿ ನಮ್ಮ ಸದಸ್ಯರು ವಿಫಲರಾದರು. ಇದರಿಂದ ಅನಿವಾರ್ಯವಾಗಿ ನಾವು ವಿಷಯ ಸಮಿತಿಗಳನ್ನು ರದ್ದುಪಡಿಸಬೇಕಾಯಿತು. ಮತ್ತೆ ಶಾಸಕರುಗಳನ್ನು ಒಳಗೊಂಡು ಫಾರಿನ್ ಟೂರ್. ನನಗೆ ಈಗಲೂ ನೆನಪಿದೆ, ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕಂಡು, ನಾವು ಈ ರೀತಿಯೆಲ್ಲಾ ಹೊರಟಿದ್ದೇವೆ, ಈ ರೀತಿ ಮಾಡಿಕೊಂಡಿದ್ದೇವೆಂದು ಹೇಳಿದ್ದಕ್ಕೆ, ಅವರು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ, ಹೋಗಿ ಬನ್ನಿ ಎಂದು ಹೇಳಿದರು. ನಾವು ಸರ್ಕಾರಕ್ಕೇನೂ ಮೂರು ನಯಾಪೈಸೆ ಖರ್ಚು ಮಾಡಿಸಲಿಲ್ಲ. ಎಲ್ಲಾ ಶಾಸಕರುಗಳಿಗೂ ವರ್ತಮಾನ ಕೊಟ್ಟೆವು. ಕೆಲವರಿಗೆ ತಲುಪಲಿಲ್ಲ, ಕೆಲವರು ಬರುತ್ತೇವೆಂದು ಹೇಳಿ, ಅವರದೇ ಆದ ಕಾರಣಗಳನ್ನು ಬರೆದರು. ನಮ್ಮ ಸ್ವಂತ ಹಣದಿಂದ ಟ್ರಾವೆಲ್ ಏಜೆನ್ಸಿ ಮುಖಾಂತರ ಪ್ರವಾಸ ಹೋದೆವು. ವಿದೇಶಗಳಲ್ಲೂ ಕೂಡ ನಾವು ಅವರಿಂದ, ಬೇರೆ ಸರ್ಕಾರಗಳಿಂದ ಅಥವಾ ಅಲ್ಲಿಯ ಸಂಸತ್‌ನಿಂದ ನಾವು ಯಾವ ಸೌಲಭ್ಯಗಳನ್ನೂ ಅಪೇಕ್ಷೆ ಮಾಡಲಿಲ್ಲ. ಕೆಲವು ಕಡೆ ಭೇಟಿಯನ್ನು ಅಪೇಕ್ಷೆ ಮಾಡಿದೆವು. ಕೆಲವು ಕಡೆ ಭೇಟಿ ಆಯಿತು. ಆದರೆ, ವಿಶ್ವದ ಇತಿಹಾಸದ ಬಗ್ಗೆ, ವಿಶ್ವದ ಬೆಳವಣಿಗೆ ಬಗ್ಗೆ ಇತರೆ ದೇಶಗಳ ಸಂಸ್ಕೃತಿಯ ಬಗ್ಗೆ ತಿಳಿದುಕೊಳ್ಳುವುದಕ್ಕೆ ನಮ್ಮ ಅನೇಕ ಜನರಿಗೆ ಅನುಕೂಲವಾಯಿತು. ಬಹಳ ಕಡಿಮೆ ವೆಚ್ಚದಲ್ಲಿ ನಾವು

ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳುವುದಕ್ಕೆ, ನಮಗೊಂದು ಅವಕಾಶ ಸಿಕ್ಕಿತು. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಾ ಇದ್ದರು. ನನಗೆ ಅನೇಕ ಸಲ ಫಾರಿನ್‌ಗೆ ಹೋಗತಕ್ಕ ಅವಕಾಶ ಬಂದರೂ ನಾನು ಹೋಗಲಿಕ್ಕಾಗಲಿಲ್ಲ. ನನಗೆ ಇದೇ ಮೊದಲನೇ ಸಲ ಅವಕಾಶ ಸಿಕ್ಕಿದ್ದು ಎಂದರು. ಆಮೇಲೆ ಯಡಿಯೂರಪ್ಪನವರು ಪೂರ್ತಿಯಾಗಿ ನಗತಕ್ಕಂತಾದ್ದನ್ನು ನಾನು ನೋಡಿದ್ದೇ ಫಾರಿನ್ ಟೂರ್‌ನಲ್ಲಿ, ಅದಕ್ಕೆ ಮೊದಲು ಅವರು ನಗುವುದನ್ನೇ ನೋಡಿರಲಿಲ್ಲ. ಎಲ್ಲಾ ಒಬ್ಬೊಬ್ಬರನ್ನೂ ನಮ್ಮ ಕೊನೇ ಉಸಿರು ಇವರುವವರೆಗೂ ಮರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ನಾವೆಲ್ಲರೂ ಕೂಡ ಜರ್ಮನಿಗೆ ಹೋಗಿ ಹಿಟ್ಲರ್‌ನ ಕಾನ್‌ಸಿಟೇಷನ್ ಕ್ಯಾಂಪನ್ನು ನೋಡಿದಾಗ, ಹಿಟ್ಲರ್ ತನ್ನ ವಿರೋಧಿಗಳನ್ನು ಯಾವರೀತಿ ಹಿಂಸಿಸಿದ ಎಂದು ಹೇಳಿದಾಗ, ಬಹುಶಃ ಎಲ್ಲರಿಗೂ ಕೂಡ ತಮಗೆ ಅರಿವಿಲ್ಲದಂತೆ ಕಣ್ಣಲ್ಲಿ ನೀರು ಸುರಿಯುತ್ತದೆ. ಅನೇಕ ಸಲ ನಾವು ಹಿಟ್ಲರ ಬಗ್ಗೆ ಮಾತನಾಡುತ್ತೇವೆ. ನಮಗೆ ಇತಿಹಾಸದ ಪರಿಚಯ ಇರುವುದಿಲ್ಲ, ಹಿಟ್ಲರ್‌ನ ಪರಿಚಯ ಕೂಡ ಇರುವುದಿಲ್ಲ. ಹಾಗೆಯೇ ಲೋಕಾಭಿರಾಮವಾಗಿ ಹಿಟ್ಲರ್‌ನಂತೆ ಮಾಡುತ್ತೇವೆಂದು ಹೇಳುತ್ತೇವೆ. ಹಿಟ್ಲರ್ ಏನು ಮಾಡಿದ ಎನ್ನುವುದನ್ನು ಕಣ್ಣಾರೆ ನೋಡಿದಾಗ ಬಹುಶಃ ಎಂತಹ ಮಾನವ ದ್ವೇಶಿ ಎಂಬುದು ಮತ್ತು ಹಿಟ್ಲರ್‌ನ ಸಿದ್ಧಾಂತದ ಬಗ್ಗೆ, ಹಿಟ್ಲರ್‌ನ ನಡವಳಿಕೆ ಬಗ್ಗೆ ಮನುಷ್ಯರಾಗಿರತಕ್ಕಂಥವರಿಗೆ ಜಿಗುಪ್ಸೆ ಮತ್ತು ಅಸಹ್ಯ ಬರದೇ ಇರುವುದಕ್ಕೆ ಸಾಧ್ಯವೇ ಇಲ್ಲ. ಇದನ್ನು ಕಣ್ಣಾರೆ ನೋಡಿ ಬಂದವರಿಗಂತು ಇನ್ನು ಕೂಡ ಬಹಳ ಪರಿಣಾಮವಾಗಿರುತ್ತದೆ. ಐರೋಪ್ಯ ರಾಷ್ಟ್ರಗಳ ಪ್ರವಾಸವನ್ನು ನಾವು ಮಾಡಿದಾಗಲೂ ಕೂಡ, ಮೋಜಿಗೆ ಹೋಗಿದ್ದಾರೆ, ಯಾರೋ ಏಕ್ಸೈಸ್ ಕಂಟ್ರಾಕ್ಟರು ದುಡ್ಡುಕೊಟ್ಟಿದ್ದಾರೆ ಈ ರೀತಿಯೆಲ್ಲಾ ಬಂತು. ಚಿಂತೆಯಿಲ್ಲ, ಪ್ರಜಾಪ್ರಭುತ್ವದಲ್ಲಿ ಇವೆಲ್ಲಾ ಬಂದೇ ಬರುತ್ತವೆ. ಇದಕ್ಕೆಲ್ಲಾ ನಾವು ಬೇಸರಪಟ್ಟುಕೊಳ್ಳಬೇಕಾಗಿಲ್ಲ. ಅವರವರು ತಮ್ಮದೇ ಆದಂಥ ಶ್ರಮದಿಂದ ಹಣವನ್ನು ಕೊಟ್ಟು ಬಂದಿದ್ದರು. ಇವೆಲ್ಲಾ ಈ ಅವಧಿಯಲ್ಲಿ ನಾವು ಮಾಡಿದಂಥ ಒಳ್ಳೆಯ ಕೆಲಸಗಳೆಂದು ನನ್ನ ಭಾವನೆ. ಮಾನ್ಯ ವಾಟಾಳರು ಹೇಳಿದಂತೆ, ನಾನು ಈ ಬಿಲ್‌ನ್ನು ಉಪಯೋಗಿಸಲಿಲ್ಲ. ಆದರಿಂದ ಕೆಲವು ಸಲ ನನಗೆ ತೊಂದರೆಯೂ ಆಗಿದೆ. ನನ್ನನ್ನು ನಾನು ಹಿಂಸಿಸಿಕೊಂಡು ಸುಮ್ಮನಿರಬೇಕಾಯಿತು. ಅದಕ್ಕಿಂತಲೂ ಹೆಚ್ಚಾಗಿ ಕಳೆದ ನಾಲ್ಕುಮುಕ್ಕಾಲು ವರ್ಷಗಳಲ್ಲಿ, ಈ ಸದನದಲ್ಲಿ ಯಾವ ಸನ್ನಿವೇಶದಲ್ಲೂ, ಯಾವ ಸದಸ್ಯರನ್ನೂ ಕೂಡ ನಾವು ಸಸ್ಪೆಂಡ್ ಮಾಡಿಲ್ಲ. ನೇಮ್ ಮಾಡಲಿಲ್ಲ, ಕ್ರಮ ಜರುಗಿಸಲಿಲ್ಲ. ಇದರ ಕೀರ್ತಿ ನನಗೆ ಬರುವುದಿಲ್ಲ. ಈ ಕೀರ್ತಿ ಸದನಕ್ಕೆ ಸಲ್ಲಬೇಕು. ವಿಶೇಷವಾಗಿ ವಿರೋಧಪಕ್ಷದ ಸದಸ್ಯರಿಗೆ ಸಲ್ಲಬೇಕು. ಯಾರೂ ಕೂಡ ಆ ರೀತಿಯಾಗಿ ಎಂದೂ ವರ್ತಿಸಲಿಲ್ಲ. ಎಲ್ಲೋ ನಾಲ್ಕೈದು ಸಂದರ್ಭಗಳಲ್ಲಿ, ಒಂದೊಂದು ವಿಷ ಘಳಿಗೆಯಲ್ಲಿ ಮಾತ್ರ ಆ ತರಹ ಆಯಿತು. ಮತ್ತೆ ಎಲ್ಲೋ ಒಂದು ಕಡೆಗೆ ನಾವು ಮತ್ತೆ ಯಥಾಸ್ಥಿತಿಗೆ ವಾಪಸ್ಸಾಗಿದ್ದೇವೆ. ಕೆಲವು ಸಲ ನಾನೇ ದುಡುಕಿ ಮಾತನಾಡಿರತಕ್ಕಂಥಾದ್ದು, ಆವೇಶದಿಂದ ನಡೆದುಕೊಂಡಿರತಕ್ಕಂಥಾದ್ದು ಉಂಟು. ನಂತರ ಸ್ವತಃ ನಾನೇ ಪಶ್ಚಾತ್ತಾಪ ಪಟ್ಟುಕೊಂಡಿರುವುದೂ ಉಂಟು. ಕೆಲವು ಸಲ ಅದನ್ನು ನಡೆದುಕೊಳ್ಳುವುದಕ್ಕಾಗದೇ ಹೇಳಿ ಹಂಚಿಕೊಂಡಿದ್ದೇನೆ. ಪತ್ರಿಕೆಯವರು ಬಹಳ ದೊಡ್ಡ ರೀತಿಯಲ್ಲಿ ನಮ್ಮ ಜೊತೆ ಸಹಕರಿಸಿದ್ದಾರೆ. ಕಲಾಪಗಳ ಬಗ್ಗೆ ಗೌರವ ಮೂಡುವುದಕ್ಕೆ ನಮ್ಮನ್ನು ನಾವು ತಿದ್ದಿಕೊಳ್ಳುವುದಕ್ಕೆ ಪತ್ರಿಕೆಯವರ ಕೊಡುಗೆ ನಾವು ಯಾರೂ ಕೂಡ ಅಲ್ಲಗಳೆಯುವುದಕ್ಕೆ

ಸಾಧ್ಯವಿಲ್ಲ. ಎಲ್ಲಾ ಸನ್ನಿವೇಶಗಳಲ್ಲಿ ನಮ್ಮ ಮೂಗಿಗೆ ನೇರವಾಗಿ ನಮ್ಮನ್ನು ಖುಷಿಪಡಿಸಲಿಕ್ಕೆ ಅವರು ಬರೆಯುವುದು ಸಾಧ್ಯವಿಲ್ಲ. ಕೆಲವು ಸಲ ಅವರು ಬರೆಯುವುದು ನಮಗೆ ಹಿಡಿಸದೆಯೂ ಹೋಗಬಹುದು. ಆದರೆ ಎಲ್ಲೋ, ಒಂದು ಕಡೆಗೆ ಈ ರೀತಿಯ ಅಂಕುಶ ನಮ್ಮ ಮೇಲೆ ಇಲ್ಲದೇ ಹೋದರೆ ನಾವು ಸಲಗಗಳಾಗಿ ವರ್ತಿಸತಕ್ಕ ಸಂಭವ ಹೆಚ್ಚಿರುತ್ತದೆ. ಆದ್ದರಿಂದ, ನಮ್ಮನ್ನು ತಿದ್ದುವ ವಿಚಾರದಲ್ಲಿ ಕಣ್ತೆರೆಸುವ ವಿಚಾರದಲ್ಲಿ ಅವರಿಂದ ಬಂದಂಥ ಲೇಖನಗಳು, ಸಂಪಾದಕೀಯಗಳು, ವಿಮರ್ಶೆಗಳು ಸಾಕಷ್ಟು ಈ ಸದನದ ಕಲಾಪಗಳನ್ನು ಸುಧಾರಿತ ರೀತಿಯಲ್ಲಿ, ಗೌರವಯುತವಾಗಿ ನಡೆಸಿಕೊಂಡು ಹೋಗುವುದಕ್ಕೆ ಅನುವಾಗಿದೆ ಎಂದು ಹೇಳಿ, ಪತ್ರಿಕೆಯವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಹೃದಯಾಂತರಾಳದಿಂದ ಸಲ್ಲಿಸುತ್ತಿದ್ದೇನೆ. ಇನ್ನು ನಮ್ಮ ಮುಖ್ಯ ಸಚೇತಕರು. ಮೊದಲಿಗೆ ಶ್ರೀಮಾನ್ ವರದೇಗೌಡರು ನನ್ನ ಜೊತೆಗೆ ಮುಖ್ಯ ಸಚೇತಕರಾಗಿ ಕೆಲಸ ಮಾಡಿದರು. ಬಹುಶಃ ಮಂತ್ರಿಯಾಗದೇ ಮುಖ್ಯ ಸಚೇತಕರಾಗಿಯೇ ಇದ್ದಿದ್ದರೆ ಚೆನ್ನಾಗಿತ್ತು. ಶ್ರದ್ಧೆಯಿಂದ ಇರುತ್ತಿದ್ದರು, ಅಸೆಂಬ್ಲಿಗೆ ಬರುತ್ತಿದ್ದರು, ಎಲ್ಲಾ ವಿಚಾರವನ್ನು ನನ್ನ ಹತ್ತಿರ ಕೇಳಿ ತಿಳಿದುಕೊಳ್ಳುತ್ತಿದ್ದರು. ಅವರಿಗೆ ಅದೇ ಕೆಲಸ ಚೆನ್ನಾಗಿತ್ತು. ಅವರು ನನ್ನ ಬಿಟ್ಟು ಹೋಗಿ ಏನೂ ಸುಖಪಡಲಿಲ್ಲ. ಒಂದು ದಿವಸ ನಾನು ಕೇಳಿದೆ, ಕೌಲ್ ಅಂಡ್ ಶಕ್ದರ್ ನೀವು ಇಟ್ಟುಕೊಳ್ಳಬೇಕೆಂದು ಹೇಳಿದರೆ ಅದು ನಮ್ಮ ಹತ್ತಿರ ಸಿಗುವುದಿಲ್ಲ ಸಾರ್ ಎಂದು ಹೇಳಿದರು. ನನಗೆ ಈ ವರದೇಗೌಡರು ಇಂತಹ ಕೆಲಸ ಕೊಡುತ್ತಾರೆ, ನಾನು ಒಂದು ಹೇಳಿದರೆ, ಈತ ಒಂದು ಹೇಳುತ್ತಾನೆ ಅಂತ ನನಗನಿಸಿತು. ಆಮೇಲೆ ಅವರನ್ನು ಕರೆಸಿ, ಕೂಡಿಸಿಕೊಂಡು ವಿವರಣೆ ಕೊಟ್ಟೆ. ಆಗ ಅವರು, ನಾನು ಇಟ್ಟುಕೊಳ್ಳುತ್ತೇನೆ ತಮ್ಮ ಗೈಡೆನ್ಸ್ ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು. ನಂತರ ಬಂದಂಥ ವಸಂತ ಬಂಗೇರ ಅವರು. ಅವರಿಗೂ ನಮ್ಮ ನಾಣಯ್ಯನವರದೇ ಸಮಸ್ಯೆ. ಸಮಯ ನಿಗದಿ ಇರುತ್ತೆ. ಅದಾದ ಮೇಲೆ ಅವರು ಇಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಅವರು ಹೊರಟುಬಿಡಬೇಕು. ಅವರೇನೆಂದರೆ, ತಮ್ಮ ಮೇಲೆ ತಾವು ಹಾಕಿಸಿಕೊಳ್ಳುವುದಿಲ್ಲ. ಸದಸ್ಯರೆಲ್ಲಾ ಬೇಜಾರು ಮಾಡಿಕೊಳ್ಳುತ್ತಿದ್ದಾರೆ, ಬೇಗ ಅಡ್ಜರ್ನ್ ಮಾಡಿ ಎಂದು ಹೇಳುತ್ತಾರೆ. ಆದರೆ, ತಮ್ಮ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ಮಾಡುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಕೆಲವರು ಎದ್ದುನಿಂತು ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ, ನಿಲ್ಲಿಸುವುದೇ ಇಲ್ಲ. ಆಗ ನಾನು ನೋಡಿ ವಸಂತ್‌ರವರೇ ಎಂದರೆ, ಅವರು ಹೋಗುವುದು, ಇವರು ಎಳೆಯುತ್ತಾರೆ, ಅವರು ಕುಳಿತುಕೊಳ್ಳುವುದಿಲ್ಲ. ರಾಜಣ್ಣನವರು ಮಾತು ನಿಲ್ಲಿಸಬೇಕು, ಅವರು ನಿಲ್ಲಿಸುವುದಿಲ್ಲ, ಇವರು ಬಿಡುವುದಿಲ್ಲ. ವೈಜನಾಥ ಪಾಟೀಲರಿಗೆ ಸ್ವಲ್ಪ ಸಮಾಧಾನ ಮಾಡಿ ಎಂದರೆ, ಅವರಿಗೆ ಸಮಾಧಾನವಾಗುವುದಿಲ್ಲ, ಇವರೂ ಬಿಡುವ ಹಾಗೆ ಇಲ್ಲ. ಈ ತರಹ ಕೆಲಸವನ್ನೂ ಒಬ್ಬ ಸಹೋದ್ಯೋಗಿಗೆ ಕೊಡಬಹುದು ಎಂದು ನಾನು ಊಹೆಯನ್ನೂ ಮಾಡಿರಲಿಲ್ಲ. ಇವರು ತಮಗೆ ವಹಿಸಿದ ಕೆಲಸವನ್ನು ಶ್ರದ್ಧೆಯಿಂದ ಮಾಡಿದ್ದಾರೆ. ಆದ್ದರಿಂದ, ವರದೇಗೌಡರನ್ನು ಮತ್ತು ವಸಂತ ಬಂಗೇರ ಅವರನ್ನು ಅತ್ಯಂತ ಕೃತಜ್ಞತಾ ಭಾವದಿಂದ ಸ್ಮರಿಸಿಕೊಂಡು, ಅವರ ಸಹಕಾರವನ್ನು ನೆನಪು ಮಾಡಿಕೊಳ್ಳುತ್ತೇನೆ. ಮತ್ತೆ ಎರಡು ನಷ್ಟಗಳನ್ನು ನಾವು ಅನುಭವಿಸಿದ್ದೇವೆ. ವೈ. ರಾಮಕೃಷ್ಣ ಅವರು ಸಂಸದೀಯ ಕಲಾಪಗಳಲ್ಲಿ ಅತ್ಯಂತ ನುರಿತ ರಾಜಕಾರಣಿ. ಯಾವುದೇ ಒಂದು ಬಿಲ್ಲನ್ನು ಮಂಡಿಸಬೇಕಾಗಿದ್ದರೆ, ಸರ್ಕಾರದವರು ನಾಲ್ಕು ಸಲ ಆಲೋಚನೆ ಮಾಡಬೇಕು. ಸದನದ

ಕಲಾಪಗಳಿಗೆ, ಸಾರ್ವಜನಿಕ ಜೀವನಕ್ಕೆ ಅವರ ಅಕಾಲಿಕ ಸಾವು ಬಹಳ ದೊಡ್ಡ ನಷ್ಟವನ್ನುಂಟು ಮಾಡಿದೆ. ಬ್ಯುರೋಕ್ರಸಿಯಿಂದ ಇಂತಾದ್ದೇ ಒಂದು ಅನಿರೀಕ್ಷಿತ ಘಟನೆ ನಡೆದದ್ದು, ಬಹಳ ನಷ್ಟಕ್ಕೆ ಈಡು ಮಾಡಿದ್ದು ನಮ್ಮ ಗೃಹ ಕಾರ್ಯದರ್ಶಿಗಳಾಗಿ ಅನಂತರ ಅಡಿಷನಲ್ ಚೀಫ್ ಸೆಕ್ರೆಟರಿಯಾಗಿ ಸೇವೆ ಸಲ್ಲಿಸಿ ನಮ್ಮೆಲ್ಲರೊಡನೆ ಬಹಳ ಆತ್ಮೀಯತೆಯಿಂದ ಕೆಲಸ ಮಾಡಿ, ತೀರಿಕೊಂಡಂಥ ದಿವಂಗತ ಎನ್.ಎ. ಮುತ್ತಣ್ಣನವರು. ಅನೇಕ ಸಂದರ್ಭಗಳಲ್ಲಿ ಕ್ಲಿಷ್ಟ ಸಮಸ್ಯೆಗಳಿದ್ದಾಗ, ಅವರು ಬಂದು ನಮ್ಮೊಡನೆ ಚರ್ಚೆ ಮಾಡುತ್ತಿದ್ದರು. ಯಾವ ಸನ್ನಿವೇಶದಲ್ಲೂ ರಾಜಿಯಾಗತಕ್ಕಂಥ ಮನೋಭಾವ ಅಲ್ಲ, ಸಡಿಲಗೊಳ್ಳುವುದಿಲ್ಲ. ಆದರೆ ಜನಪರವಾದಂಥ ನಿಲುವು. ಮುತ್ತಣ್ಣನವರ ಅಕಾಲಿಕ ಸಾವು ಕೂಡ ನಮ್ಮ ರಾಜ್ಯದ ಅಧಿಕಾರದಲ್ಲಿ, ಬ್ಯುರೋಕ್ರಸಿಗೆ ಬಹಳ ದೊಡ್ಡ ನಷ್ಟವನ್ನುಂಟು ಮಾಡಿದೆ ಎಂದು ನಾನು ಈ ಘಳಿಗೆಯಲ್ಲಿ ನೆನಪು ಮಾಡಿಕೊಳ್ಳದೇ ಹೋದರೆ ಬಹಳ ದೊಡ್ಡ ತಪ್ಪಾಗುತ್ತದೆ. ಮಾನ್ಯ ಮುಖ್ಯ ಕಾರ್ಯದರ್ಶಿಗಳಾದಿಯಾಗಿ, ಬ್ಯುರೋಕ್ರಸಿಯಲ್ಲಿರತಕ್ಕಂಥ ಎಲ್ಲಾ ಇಲಾಖಾ ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರುಗಳು, ಕೆಳಹಂತದಲ್ಲಿರತಕ್ಕಂಥವರು ಬಹಳ ದೊಡ್ಡ ರೀತಿಯಲ್ಲಿ ನನ್ನ ಜೊತೆ ಸಹಕರಿಸಿದ್ದಾರೆ. ಯಾವ ಸನ್ನಿವೇಶದಲ್ಲೂ ಕೂಡ, ಯಾರೊಡನೆಯೂ ಬೇಸರ ಮಾಡಿಕೊಳ್ಳತಕ್ಕ ಸಮಯವೇ ಒದಗಿ ಬರಲಿಲ್ಲ. ಮುಖ್ಯಮಂತ್ರಿಗಳ ಕಾರ್ಯಾಲಯದ ಬಗ್ಗೆ ಎಲ್ಲರೂ ತಮ್ಮ ಮೆಚ್ಚುಗೆಯನ್ನು ಸೂಚಿಸಿದ್ದಾರೆ. ಬಿ.ಎಸ್. ಪಾಟೀಲರಿಗೆ, ನನಗೇನಾದರೂ ಸಮಸ್ಯೆ ಇದ್ದರೆ, ನಾನು ಹೇಳಿದ ತಕ್ಷಣ ಅವರು ನನ್ನ ಕಚೇರಿಗೆ ಬರುತ್ತಿದ್ದರು. ನೋಡಿ, ಮಾಡಿ ಕೊಡುತ್ತೇನೆಂದು ಹೇಳುವರು. ನಮಗೆ ಮುಜುಗರ ಅಥವಾ ಬೇಸರ ಉಂಟಾಗತಕ್ಕ ಸಂದರ್ಭಗಳು ಯಾವಾಗಲೂ ಒದಗಿಬರಲಿಲ್ಲ. ಇಂತಹ ಸನ್ನಿವೇಶದಲ್ಲಿ ನಮ್ಮ ಒಡನೆ ಸಹಕರಿಸಿದವರನ್ನು ನೆನಪು ಮಾಡಿಕೊಳ್ಳತಕ್ಕಂತಾದ್ದು ನಮ್ಮ ಕರ್ತವ್ಯ. ನನ್ನ ಸಿಬ್ಬಂದಿ, ವಿಧಾನ ಮಂಡಲದ ಸಿಬ್ಬಂದಿ ಯಾವಾಗಲೋ ಏನೋ ಮುಷ್ಕರ ಮಾಡುವುದು, ಮತ್ತೊಂದು ಹೇಳುತ್ತಿದ್ದರು. ನಾನು ಈ ನಾಲ್ಕುಮುಕ್ಕಾಲು ವರ್ಷಗಳಲ್ಲಿ ಒಂದು ದಿನವೂ ಅವರು ಮುಷ್ಕರ ಮಾಡಿದ್ದನ್ನು ನೋಡಲಿಲ್ಲ. ಒಂದು ದಿವಸವೂ ನನಗೆ ಅಸಹಕಾರವನ್ನೂ ಕೊಡಲಿಲ್ಲ. ಏನಿದ್ದರೂ ಬಂದು ಚರ್ಚೆ ಮಾಡುತ್ತಿದ್ದರು. ಅವರು ಯಾವಾಗ ಬಂದು ಸಮಯ ಕೇಳಿದ್ದರೂ ಕೊಡುತ್ತಾ ಇದ್ದೆ. ಸಣ್ಣ ಪುಟ್ಟ ಸಮಸ್ಯೆಗಳು ಇತ್ತು, ಅವುಗಳನ್ನು ನಿವಾರಿಸಿಕೊಂಡರು. ಬಹಳ ಉತ್ತಮ ರೀತಿಯಲ್ಲಿ ನಮ್ಮ ವಿಧಾನ ಮಂಡಲದ ಸಚಿವಾಲಯವನ್ನು ನಡೆಸಿಕೊಂಡು ಹೋಗುವುದಕ್ಕೆ ಅವರು ಸಹಕರಿಸಿದ್ದಾರೆ. ಕಡೆಗೆ ನಮ್ಮ ಲೆಜಿಸ್ಲೇಟರ್ಸ್ ಹಾಸ್ಟಲಿನಲ್ಲಿ ಕೆಲಸ ಮಾಡತಕ್ಕಂಥ ಡ್ರೈವರ್ಸ್ ಆಗಲಿ. ನಾನು ಅವರಿಗೆ ಹೇಳಿದ್ದೆ, ಆತ್ಮೀಯತೆಗೆ ನನ್ನಲ್ಲಿ ಕೊರತೆ ಇರುವುದಿಲ್ಲ. ಆಶಿಸ್ತನ್ನು ನಾನು ಸಹಿಸುವುದಿಲ್ಲ. ಅವರೆಲ್ಲರೂ ಕೂಡ ಈ ಫ್ರೇಮ್ ವರ್ಕ್‌ನೊಳಗೆ ಬಂದು ಹೆಚ್ಚು ಗೌರವಯುತವಾಗಿ ಕೆಲಸ ಮಾಡುವುದಕ್ಕೆ ನಮಗೆ ಸಹಕರಿಸಿದ್ದಾರೆಂದು ನೆನಪು ಮಾಡಿಕೊಳ್ಳಬೇಕು. ರಾಜ್ಯಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಅನೇಕ ಸಂದರ್ಭಗಳಲ್ಲಿ, ಅವರ ಸಮಸ್ಯೆಗಳಿದ್ದಾಗ ಬಂದು ನನ್ನ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ, ನಮಗೆ ಸಹಕಾರವನ್ನು ಕೊಟ್ಟಿದ್ದಾರೆ. ಮಾನ್ಯ ಜೆ.ಹೆಚ್.ಪಟೇಲ್‌ರವರು ಹಾಸ್ಯಪ್ರಜ್ಞೆ ವಿಚಾರ, ತಮಗೆಲ್ಲರಿಗೂ ಗೊತ್ತಿದೆ. ಒಂದು ವಿಚಾರವನ್ನು ಅವರೇ ನೆನಪು ಮಾಡಿಕೊಂಡು ಹೇಳಿದರು. ಇದೇ ಸದನದಲ್ಲಿ ಅವರು ಒಂದು ಸಲ.1981ರಲ್ಲಿ ವೀರಪ್ಪಮೊಯ್ಲಿಯವರು ಹಣಕಾಸು ಸಚಿವರಾಗಿದ್ದರು

ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿದ್ದರು. ಹೋಲ್‌ಸೇಲ್ ರೀಟೈಲ್‌ನ ಬಗ್ಗೆ ವಿನಾಯಿತಿಯನ್ನು ಕೊಡುವ ಬಗ್ಗೆ ಒಂದು ಮನವಿ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿದರು. ಅದೇ ಸಂದರ್ಭದಲ್ಲಿ ಮಾನ್ಯ ಶ್ರೀಕಂಠಯ್ಯನವರು ಬಹಳ ದೊಡ್ಡ ಸಂಖ್ಯೆಯಲ್ಲಿ ಶಾಸಕರುಗಳನ್ನು ಕರೆದುಕೊಂಡು ಕಾಂಗ್ರೆಸ್‌ಗೆ ಹೋಗಿದ್ದರು. ಅನಂತರ ಮಾನ್ಯ ರಂಗನಾಥ್ ರವರು ಕೆಲವು ದಿವಸಗಳು ಕಳೆದ ಮೇಲೆ ಕೆಲವರನ್ನು ಕರೆದುಕೊಂಡು ಹೋಗಿದ್ದರು. ಅದಕ್ಕೆ ಜೆ.ಹೆಚ್.ಪಟೇಲರು ಹೋಲ್‌ಸೇಲ್ ಎಂದರೆ ಶ್ರೀಕಂಠಯ್ಯನವರು ಕರೆದುಕೊಂಡು ಹೋದಂತೆ ಎಲ್ಲರನ್ನು ಕರೆದುಕೊಂಡು ಹೋಗುವುದು, ರೀಟೈಲ್ ಎಂದರೆ ರಂಗನಾಥರವರು ಹೋದಂತೆ ಐದಾರು ಜನರನ್ನು ಕರೆದುಕೊಂಡು ಹೋಗೋದು ಎಂದು ಸದನದಲ್ಲಿ ಹೇಳಿದರು. ಈಗ ಹೋಲ್‌ಸೇಲ್ ಮಾಡುವ ಕೆಪಾಸಿಟಿ ಯಾರಿಗೂ ಇಲ್ಲ ಏನೇ ಇದ್ದರು ರೀಟೈಲ್ ಮಾಡಬೇಕು. ಒಟ್ಟಿನಲ್ಲಿ ಯಾರೇ ಎಲ್ಲೇ ಆದರು ಹೋಲ್‌ಸೇಲ್ ಏಜೆನ್ಸಿ ಎಲ್ಲ ಹೊರಟು ಹೋಗಿದೆ, ಇನ್ನು ಮುಂದೆ ಆಗತಕ್ಕ ವ್ಯವಹಾರವೆಲ್ಲ ರೀಟೈಲ್‌ನಲ್ಲೇ ಆಗಬೇಕು. ಹಾಗೆಯೇ ಈ ಬಾರಿಯ ಸದನದಲ್ಲಿ ಒಂದು ಮಾತನ್ನು ಹೇಳಿದರು, ಅಸಂಬದ್ಧವಾಗಿ ಮಾತನಾಡುವ ಬಗ್ಗೆ ಅವರು ತಮ್ಮದೇ ಆದ ರೀತಿಯಲ್ಲಿ ಒಬ್ಬ ಸದಸ್ಯರನ್ನು ಕುರಿತು ಹೇಳಿದರು. ತಾವು ಮಾತನಾಡುವಾಗ ಆಕಾಶಕ್ಕೆ ಭೂಮಿಗೆ ಎಷ್ಟು ದೂರ ಇದೆ, ಆಕಾಶದಲ್ಲಿ ನಕ್ಷತ್ರಗಳು ಎಷ್ಟು ಇವೆ, ಸಮುದ್ರ ಎಷ್ಟು ಕಿಲೋಮೀಟರ್ ಇದೆ, ನಿಮ್ಮ ಊರಿನಲ್ಲಿ ಕುರಿ ಎಷ್ಟು ಇದೆ, ನಮ್ಮ ಊರಿನಲ್ಲಿ ನಾಯಿ ಎಷ್ಟು ಇದೆ, ಮುಂತಾದವುಗಳನ್ನೆಲ್ಲ ಹೇಳಿ ನನ್ನ ವಯಸ್ಸು ಎಷ್ಟು ಎಂದು ಕೇಳಿದ, ಅದಕ್ಕೆ ನಿನ್ನ ವಯಸ್ಸು 44 ಎಂದು ನಾನು ಹೇಳಿದೆ ಅರೆ, ನನ್ನ ವಯಸ್ಸು ಸರಿಯಾಗಿ ನಿನಗೆ ಹೇಗೆ ಗೊತ್ತಾಯಿತು ಎಂದು ಅವನು ಕೇಳಿದ, ನಮ್ಮ ಊರಿನಲ್ಲಿ ಒಬ್ಬ ಅರೆ ಹುಚ್ಚು ಇದ್ದಾನೆ ಅವರ ವಯಸ್ಸು 22, ಆದ್ದರಿಂದ ನಿನಗೆ 44 ಎಂದು ನಾನು ಹೇಳಿದೆನಪ್ಪ ಎಂದು ಹೇಳಿದರು. ಇದು ಹಾಸ್ಯ ಆದರೂ ಇಂಥ ಒಬ್ಬ ಮೇಧಾವಿಯನ್ನು ಈ ಸದನ ಸಭಾನಾಯಕರನ್ನಾಗಿ ಪಡೆದುಕೊಂಡಿದೆ. ಅವರ ಜೊತೆಗೆ ಕೆಲಸ ಮಾಡತಕ್ಕ ಅವಕಾಶ ನನಗೆ ಸಿಕ್ಕಿದ್ದು ನನ್ನ ಪುಣ್ಯ ಎಂದು ನಾನು ಭಾವಿಸಿದ್ದೇನೆ. ಮಾನ್ಯ ರಾಜೇಂದ್ರನ್ ಒಂದು ಸಲ ಮಾತನಾಡುವಾಗ ಬಸ್ಸಿನಲ್ಲಿ ಮಹಿಳೆಯರಿಗೆ ಸೀಟನ್ನು ಮೀಸಲಾಗಿ ಇಡಬೇಕು ಎಂಬ ಪ್ರಶ್ನೆ ಬಂದಿತ್ತು. ಹೆಣ್ಣು ಮಕ್ಕಳ ಪಕ್ಕದಲ್ಲಿ ಯಾರಾದರೂ ಹೋಗಿ ಕುಳಿತುಕೊಂಡರೆ ದಂಡವನ್ನು ಹಾಕಬೇಕು ಎಂದು ಪ್ರಮೀಳರವರು ಹೇಳಿದರು. ಅದಕ್ಕೆ ರಾಜೇಂದ್ರನ್‌ರವರು ಹೆಣ್ಣು ಮಗಳು ಚೆನ್ನಾಗಿದ್ದರೆ ನಾನು ಅಲ್ಲೇ ಕುಳಿತುಕೊಂಡು ದಂಡವನ್ನು ಕಟ್ಟುತ್ತೇವೆ ಎಂದು ಹೇಳಿದರು. ಅಲ್ಲಿಯವರೆಗೆ ರಾಜೇಂದ್ರನ್‌ರವರ ಸಮಸ್ಯೆ ಏನು ಎಂಬ ಬಗ್ಗೆ ಐಡಿಯಾನೇ ನನಗೆ ಇರಲಿಲ್ಲ. That day I could get an idea about it. ಅನಂತರ ನಾನು ಹೇಳಿದೆ, he appears to have made some temporary arrangements. ಅನಂತರ ಆ ಸುದ್ದಿಯನ್ನು ಎತ್ತಿಲ್ಲ. ಮಾನ್ಯ ಹಷ್ಮಿಯವರು ಹೋದ ಸಲ ಮಾತನಾಡುತ್ತಿದ್ದ ವೇಳೆಯಲ್ಲಿ, ನಮ್ಮದು ಹೈದರಾಬಾದ್ ಕರ್ನಾಟಕ ಏರಿಯಾ, ನವಾಬರು ಇದ್ದರು ನಮಗೆ ಏನೋ ಮಾಡಿದ್ದಾರೆಂದು ಹೇಳುತ್ತಾರೆ, ಆದರೆ ಲಿಂಗಾಯಿತರು, ಬ್ರಾಹ್ಮಣರು ಮುಂತಾದ ದೊಡ್ಡ ದೊಡ್ಡವರೆಲ್ಲ ಹೋಗಿ ಅವರ ಜೊತೆ ಹೊಂದಿಕೊಂಡು ದೇಶ್‌ಮುಖ್, ಕುಲಕರ್ಣಿಗಳಾಗಿ ಹೋದರು ನಮಗೆ ಏನೂ ಸಿಕ್ಕಿಲ್ಲ ನೌಕರಿಯಲ್ಲಿ ಏಲ್ಲೋ ಸುಭೇದಾರ್ ಕೆಲಸ ಮಾತ್ರ ಸಿಕ್ಕಿದೆ. ನವಾಬರಿಂದ ನಮಗೆ ಏನೂ ಲಾಭ ಆಗಿಲ್ಲವೆಂದು ಹೇಳಿದ್ದರು.

The way he explained, something beautiful. how the upper class people managed to get the cream from the rulers and how the under-privileged continued to be under-privileged despite belonging to the same community, ಎಂಬುದನ್ನು ಬಹಳ ಚೆನ್ನಾಗಿ ವಿವರಿಸಿದ್ದರು. ನಮಗೆ ಅದನ್ನು ಅರ್ಥ ಮಾಡಿಕೊಳ್ಳುವ ಚೈತನ್ಯ ಇರಬೇಕು. ಮಾನ್ಯ ಪುಟ್ಟಣ್ಣಯ್ಯನವರು ಇಂಟಲೆಕ್ಯುಯಲ್‌ನ ಬಗ್ಗೆ ಮಾತನಾಡುವಾಗ ಬಹಳ ಚೆನ್ನಾಗಿ ಹೇಳಿದ್ದರು. ಯಾರು ಗಂಡ ಹೆಂಡತಿ ಇಬ್ಬರೂ ಡಬ್ಬಲ್ ಗ್ರಾಜುಯೇಟ್ಸ್, ಬುಟ್ಟಿ ತೆಗೆದುಕೊಂಡು ಮಾರುಕಟ್ಟೆಗೆ ಹೋಗಿ, ಟೊಮ್ಯಾಟೋ, ಸೌತೇಕಾಯಿ, ಬದನೆಕಾಯಿ, ಆಲೂಗೆಡ್ಡೆ ಎಲ್ಲವನ್ನು ತೆಗೆದುಕೊಂಡು ಟೊಮ್ಯಾಟೋವನ್ನು ಕೆಳಗಡೆ ಹಾಕಿ ಅದರ ಮೇಲೆ ಉಳಿದವನ್ನು ಹಾಕಿದರಂತೆ. ಅವರು ಏನು ಹೀಗೆ ಮಾಡಿದ್ದೀರಿ ಎಂದರೆ, ಅದಕ್ಕೆ ನಾನು ಡಬ್ಬಲ್ ಗ್ರಾಜುಯೇಟ್, ನನ್ನ ಹೆಂಡತಿ ಡಬ್ಬಲ್ ಗ್ರಾಜುಯೇಟ್ ಎಂದು ಆ ವ್ಯಕ್ತಿ ಹೇಳಿದನಂತೆ. ತಾವು ಟೊಮ್ಯಾಟೋವನ್ನು ಕೆಳಕ್ಕೆ ಹಾಕಿದಾಗಲೇ ತಾವು ಬುದ್ಧಿಜೀವಿಗಳು ಎಂದು ಗೊತ್ತಾಯಿತು ಎಂದು ಅವರು ಹೇಳಿದರಂತೆ. What an excellent way of presenting the matter for the so-called pseudo-intellectuals, for people who suffer from intellectual dishonesty. I don't think there could be a better message than this. This is where the speciality of the Assembly lies, the parliament lies. ಜನ ಪ್ರತಿನಿಧಿಗಳಾಗಿರತಕ್ಕವರು ತಮ್ಮ ಸಾಮಾನ್ಯ ಜ್ಞಾನದ ಆಧಾರದ ಮೇಲೆ ತಮ್ಮ ಅನುಭವದ ಆಧಾರದ ಮೇಲೆ ತಮ್ಮ ಅಂತಃಕರಣದಲ್ಲಿ ಉಂಟಾಗತಕ್ಕ ಭಾವನೆಗಳ ಆಧಾರದ ಮೇಲೆ ಆಡತಕ್ಕ ಮಾತುಗಳಿಗೆ ಎಷ್ಟು ಮಹತ್ವ ಇರುತ್ತದೆ, ಎಷ್ಟೊಂದು ಪರಿಣಾಕಾರಿಯಾಗಿ ಇರುತ್ತದೆ ಎಂಬುದನ್ನು ಇಂಥ ಕೆಲವೊಂದು ಘಟನೆಗಳಿಂದ ನಾವು ನೆನಪು ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಕಸ್ಪೆ ಎನ್ನುವವರು ಪಶುಸಂಗೋಪನಾ ಸಚಿವರಾಗಿದ್ದಾಗ ಪ್ರಾಣಿಗಳ ಸಂಖ್ಯೆಗಳ ಬಗ್ಗೆ ಉತ್ತರಕೊಡುತ್ತ ಇಷ್ಟು ಪ್ರಾಣಿಗಳು, ಇಷ್ಟೆಲ್ಲಾ ಸಂಪತ್ತು ಇದೆ, ಕುರಿಗಳು ಇಷ್ಟು ಇದೆ ಎಂದು ಹೇಳುತ್ತಿದ್ದರು. ಆಗ ನಾನು ತಮ್ಮ ಹಿಂದೆ ಇರುವವರನ್ನು ಸೇರಿಸಿಕೊಂಡಿದ್ದೀರಾ ಎಂದು ಕೇಳಿದೆ. ಮೊದಲು ಹೌದು ಎಂದು, ಆಮೇಲೆ ಇಲ್ಲ, ಸೇರಿಸಿಕೊಂಡಿಲ್ಲವೆಂದು ಹೇಳಿದರು (ನಗು).

ಅಧ್ಯಕ್ಷರು : ಈ ಸದನದಲ್ಲಿ ಮಾಲೂರಿನ ಶಾಸಕರಾದಂಥ ಶ್ರೀಮಾನ್ ದ್ಯಾವೀರಪ್ಪನವರು ಅತ್ಯಂತ ಹಿರಿಯ ಸದಸ್ಯರು. ಶ್ರೀಮಾನ್ ಮಹಂತೇಶ್ ಕೌಜಲಗಿಯವರು ಅತ್ಯಂತ ಕಿರಿಯ ಸದಸ್ಯರು. ಒಂಭತ್ತು ಜನ ನಮ್ಮ ಸದಸ್ಯರುಗಳು ಅಕಾಲಿಕ ಮರಣಕ್ಕೆ ತುತ್ತಾಗಿದ್ದರಿಂದ ಅದಂಥ ಉಪ ಚುನಾವಣೆಗಳು, ಲೋಕಸಭೆಗೆ ಆಯ್ಕೆಯಾಗಿ ರಾಜೀನಾಮೆ ಕೊಟ್ಟು ಹೋದಂಥ 14 ಜನ ಸದಸ್ಯರುಗಳಿಗೆ, ಒಟ್ಟು 23 ಉಪ ಚುನಾವಣೆಗಳು ಆಗಿ ಸದಸ್ಯರುಗಳು ಬಂದಿದ್ದರು. ಒಟ್ಟು ಹತ್ತು ಸದಸ್ಯರು ನಮ್ಮಲ್ಲಿ ಲಗ್ನ ಆಗದೇ ಇರತಕ್ಕವರು ಇದ್ದರು. ಅದರ ಪೈಕಿ ಶ್ರೀಮಾನ್ ಅಂಗಾರರವರು, ಬಾಲಕೃಷ್ಣ ಮಾಗಡಿ, ಗದ್ದಿ ನವಲಗುಂದ್, ಮಹಂತೇಶ್ ಕೌಜಲಗಿ ಈ ನಾಲ್ಕು ಜನರು ಈ ಕಷ್ಟದಿಂದ ಪಾರಾಗಿದ್ದಾರೆ. ಜಯಣ್ಣ, ತುಮಕೂರಿನ ನಾರಾಯಣ್, ರಾಜೇಂದ್ರನ್, ರಾಮದಾಸ್, ಶ್ರೀರಾಮರೆಡ್ಡಿ, ಅಂಬಡಗಟ್ಟಿಯವರು ತೀರಿಕೊಂಡರು. ಬಾಕಿಯವರಿಗೆ ಯಾವಾಗ ಮೋಕ್ಷ ಸಿಗುತ್ತದೋ ಗೊತ್ತಿಲ್ಲ.

ಅವರುಗಳಿಗೆ ಒಳ್ಳೆಯದು ಆಗಲಿ ಎಂದು ನಾನು ಹಾರೈಸುತ್ತೇನೆ. ಅಧಿವೇಶನದ ಸಮಯದಲ್ಲಿ ಕೆಲಸ ಮಾಡತಕ್ಕಂಥ ನೌಕರ ಸಿಬ್ಬಂದಿಯವರು ಬಹಳ ಶ್ರದ್ಧೆಯಿಂದ ನಮ್ಮ ಜೊತೆ ಸಹಕರಿಸಿದ್ದಾರೆ. ನಾನು ಈ ಶಾಸನ ಸಭೆಗೆ ಅಧ್ಯಕ್ಷನಾಗಿ ಬರುತ್ತೇನೆ ಎಂದು ಊಹೆ ಮಾಡಿರಲಿಲ್ಲ. ಕೆಲವು ಅನಿರೀಕ್ಷಿತ ಘಟನೆಗಳಿಂದ ನಾನು ಈ ಸ್ಥಾನಕ್ಕೆ ಬರಬೇಕಾಯಿತು. ಅನೇಕ ಜನರನ್ನು ಹೊಸದಾಗಿ ಪರಿಚಯ ಮಾಡಿಕೊಂಡಿದ್ದೇನೆ. ಹೊಸ ಸಂಬಂಧ ಬೆಳೆದು ಬಂದಿದೆ. ಕೆಲವು ಅತ್ಯಂತ ಪವಿತ್ರವಾದಂಥ ಭಾಂದವ್ಯಗಳಾಗಿ ಪರಿಣಮಿಸಿದೆ. ಇವನ್ನು ಕಡೆಯವರೆಗೆ ರಕ್ಷಿಸಿಕೊಂಡು ಹೋಗತಕ್ಕ ಪ್ರಯತ್ನವನ್ನು ಮಾಡುತ್ತೇನೆ. ವಿಧಾನ ಸಭೆಯ ಕಾರ್ಯಕಲಾಪಗಳನ್ನು ಎಷ್ಟು ಪ್ರಮಾಣದಲ್ಲಿ ಮಾಡಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ನಾವು ಮಾಡಲಿಲ್ಲ ಎಂಬ ಕೊರಗು ನನ್ನಲ್ಲಿ ಇದೆ. ಕಲಾಪಗಳ ಗುಣಮಟ್ಟ ಇನ್ನು ಹೆಚ್ಚು ಮೇಲ್ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕಾಗಿತ್ತು ಆದರೆ ಅದನ್ನು ಮಾಡಲು ಆಗಲಿಲ್ಲ ಎಂಬ ವ್ಯಥೆ ಸಹ ನನ್ನಲ್ಲಿ ಕಾಡುತ್ತಿದೆ. ನಾವು ಇನ್ನು ಹೆಚ್ಚು ಉಪಯುಕ್ತವಾದಂಥ ಜನಪರವಾದ ಚರ್ಚೆಯನ್ನು ಮಾಡಬಹುದಾಗಿತ್ತು. ಅದನ್ನು ಮಾಡಲಿಲ್ಲ, ಎಲ್ಲೋ ಸೀಮಿತ ವಲಯದಲ್ಲಿ ಸಂಘಟಿತ ವರ್ಗಗಳ ಜನರ ಸಮಸ್ಯೆಗಳನ್ನೇ ಇಲ್ಲಿ ಹೆಚ್ಚು ಚರ್ಚೆ ಮಾಡಿದೆವು, ಅಸಂಘಟಿತ ಅಸಂಖ್ಯಾತ ಜನರ ಸಮಸ್ಯೆಗಳ ಬಗ್ಗೆ ಸ್ಪಂಧಿಸುವಲ್ಲಿ ನಾವು ಹೆಚ್ಚು ಯಶಸ್ವಿಯಾಗಲಿಲ್ಲ ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತೇನೆ. ದೂರದರ್ಶನದಿಂದ ಹಿಡಿದು ಖಾಸಗಿ ಟಿ.ವಿ. ಚಾನಲ್‌ಗಳು, ಆಕಾಶವಾಣಿ, ಎಲ್ಲರೂ ನಮ್ಮೊಡನೆ ಸಹಕರಿಸಿದ್ದಾರೆ. ನಾವು ಗುಜರಾತ್, ಬಿಹಾರ್ ಉತ್ತರ ಪ್ರದೇಶದ ವಿಧಾನಸಭೆಗಳಂತೆ ಆಗದಿದ್ದರೂ ಮೈಸೂರು ಮಹಾರಾಜರ ಕಾಲದಲ್ಲಿ ಪ್ರಾರಂಭವಾದಂಥ ಪ್ರಾತಿನಿಧಿಕ ವಿಧಾನ ಪರಿಷತ್ತು ಏನಿತ್ತು ಅಲ್ಲಿಂದ ಇಲ್ಲಿಯವರೆಗೂ ನಮ್ಮ ಇತಿಹಾಸವನ್ನು ಅವಲೋಕನ ಮಾಡಿದಾಗ ಅತ್ಯಂತ ಹೆಚ್ಚು ಜನಪರವಾದ ಚರ್ಚೆಗಳು ಅಂದಿನ ವಿಧಾನಪರಿಷತ್‌ನಿಂದಲೂ ನಡೆದಿದೆ. ಬಹಳ ಶ್ರೇಷ್ಠಮಟ್ಟದ ಚರ್ಚೆಗಳಾಗಿದೆ. ನಾವು ನಮಗಿಂತ ಕೆಳಗಿರತಕ್ಕವರನ್ನು ಮಾದರಿಯಾಗಿ ಕಾಣಬೇಕಾದ ಅಗತ್ಯ ಇಲ್ಲ. ಮುಂದಿನ ದಿನಗಳಲ್ಲಿ ನಮಗೆ ಇರತಕ್ಕ ಶ್ರೇಷ್ಠ ಪರಂಪರೆ ಯಾವುದು ಇದೆ ಅದನ್ನು ಆಧಾರವಾಗಿ ಇಟ್ಟುಕೊಂಡು ನಾವು ಹೋಗಬೇಕಾಗಿದೆ. ಎಂಥ ಮದವಿರತಕ್ಕ ಸರ್ಕಾರ ಆದರೂ ಒಬ್ಬ ಗೋಪಾಲಗೌಡ ಅಂಕುಶವಾಗಿ ಕುಳಿತಿದ್ದರೆ ಆ ಮದ ಹತೋಟಿಗೆ ಬರುತ್ತದೆ. ಅದಕ್ಕೆ ಬೇಕಾಗಿರತಕ್ಕದ್ದು ಧೀಮಂತಿಕೆ ಮತ್ತು ಹೃದಯ ಶ್ರೀಮಂತಿಕೆ. ಅಂಥ ವ್ಯಕ್ತಿಗಳು ಹೆಚ್ಚು ಹೆಚ್ಚು ನಮ್ಮಲ್ಲಿ ಉದಯಿಸಿ ಬರಲಿ. ಜೀವನದ ಹಲವಾರು ಕ್ಷೇತ್ರಗಳಲ್ಲಿ ಮೌಲ್ಯಗಳ ಕುಸಿತವನ್ನು ನಾವೇನು ಗಮನಿಸುತ್ತಿದ್ದೇವೆ, ಬಹುಶಃ ಅದು ಈ ಕ್ಷೇತ್ರದಲ್ಲಿಯೂ ಕಾಣಿಸಿಕೊಳ್ಳತಕ್ಕಂಥಾದ್ದು ಸಹಜ. ಆದರೆ ಎಲ್ಲೋ ಒಂದು ಕಡೆ ರಾಜ್ಯದ ಜನತೆಗೆ ಮಾರ್ಗದರ್ಶನ ಕೊಡುವುದಕ್ಕೆ, ಅವರುಗಳ ಬದುಕನ್ನು ಉತ್ತಮಪಡಿಸುವುದಕ್ಕೆ, ನಮ್ಮನ್ನು ನಾವು ಸುಧಾರಿಸಿಕೊಳ್ಳುವುದಕ್ಕೆ ಇನ್ನೂ ಹೆಚ್ಚು ಅರ್ಪಣಾಭಾವದಿಂದ ನಾವುಗಳು ಕೆಲಸ ಮಾಡಬೇಕಾಗುತ್ತದೆ ಎಂಬ ಮಾತನ್ನು ಹೇಳಬಯಸುತ್ತೇನೆ. ನಾನು ಅನಾವಶ್ಯಕವಾಗಿ ಮಾತನ್ನು ಅವಲಂಬಿಸುವುದಿಲ್ಲ. ಬಹಳ ಜನ ಮಾನ್ಯ ಸದಸ್ಯರುಗಳಿಗೆ ಇವ್ಮೊತ್ತು ನಾನು ಅವಕಾಶವನ್ನು ಕೊಡಬೇಕಾಗಿತ್ತು. ಆದರೆ ಅದು ಆಗಲಿಲ್ಲ. ಕೊನೆಯ ದಿನವೂ ಕೂಡ ತಮ್ಮನ್ನು ನಿರಾಶೆಗೊಳಿಸಿದ್ದೇನೆ ಎಂದು ನನ್ನನ್ನು ತಪ್ಪಾಗಿ ತಿಳಿದುಕೊಳ್ಳುವುದು ಬೇಡ. ಅಪರೂಪಕ್ಕೆ ನಮ್ಮ ಶ್ರೀನಿವಾಸಗೌಡರು ಅವಕಾಶವನ್ನು ಕೋರಿದರು,

ಆದರೆ ಅವರಿಗೂ ನನಗೆ ಅವಕಾಶ ಕೊಡುವುದು ಆಗಲಿಲ್ಲ. ಅವರೆಲ್ಲರೂ ನನ್ನನ್ನು ಕ್ಷಮಿಸಬೇಕು ಮತ್ತು ನನ್ನೊಡನೆ ಸಹಕರಿಸಬೇಕು ಎಂದು ಹೇಳಿ, ಎಲ್ಲಾ ರೀತಿಯಲ್ಲಿಯೂ ನನ್ನೊಂದಿಗೆ ಸಹಕರಿಸಿದ ಮಾನ್ಯ ಸಭಾ ನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ವಿವಿಧ ಪಕ್ಷಗಳ ಮುಖಂಡರುಗಳಿಗೆ, ಪತ್ರಿಕೆಯವರಿಗೆ, ದೂರದರ್ಶನದವರಿಗೆ, ಆಕಾಶವಾಣಿಯವರಿಗೆ, ವಿಧಾನಮಂಡಲದ ನೌಕರ ಸಿಬ್ಬಂದಿವರ್ಗದವರಿಗೆ, ರಾಜ್ಯದ ನೌಕರಶಾಹಿಗೆ, ಅನಂತಾನಂತ ಧನ್ಯವಾದಗಳನ್ನು ತಿಳಿಸಿ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೇ, ತಾವುಗಳು ಈಗ ತಾನೇ ಲೈಬ್ರರಿ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ನಮ್ಮದೇ ಆದಂಥ ಮುದ್ರಣಾಲಯವೊಂದಿದ್ದರೆ ಅದರಿಂದ ತುಂಬಾ ಅನುಕೂಲವಾಗ ಬಹುದೆಂದು ಒಂದು ಪ್ರಸ್ತಾವನೆಯನ್ನು ತಮ್ಮ ಮುಖಾಂತರ ಮಾನ್ಯ ಆರ್ಥಿಕ ಸಚಿವರಿಗೆ ಕಳುಹಿಸಿದ್ದೆವು. ಅವರು ಅದಕ್ಕೋಸ್ಕರ 50ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತಾ ಇದ್ದೇನೆ. ಈ ವಿಚಾರವನ್ನು ನಾನು ಇವೊತ್ತು ಅಥವಾ ನಾಳೆ ಪ್ರಸ್ತಾಪ ಮಾಡಿಬೇಕೆಂದಿದ್ದೆನು. ಅವಕಾಶ ಇಲ್ಲದೆ ಈಗ ನಿವೇದಿಸಿಕೊಂಡಿದ್ದೇನೆ. ಮೊನ್ನೆ ತಾನೇ ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಬೇಡಿಕೆಯನ್ನು ಅದಕ್ಕೆ ಸಂಬಂಧಪಟ್ಟಂತೆ ಇಟ್ಟಿದ್ದೇನೆ. ಈಗ ಇರುವ ಲೈಬ್ರರಿಯ ಪಕ್ಕದಲ್ಲಿಯೇ ಒಂದು ಸಣ್ಣ ರೂಮನ್ನು ಮಾಡಿಕೊಟ್ಟರೆ ಅಲ್ಲಿ ತತ್‌ಕ್ಷಣ ಪ್ರಿಟಿಂಗ್‌ಪ್ರೆಸ್‌ನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಅದರಿಂದ ನಮಗೆ ಯಾವುದೇ ವಿಳಂಬವಿಲ್ಲದೆ ನಮ್ಮ ಮುದ್ರಣಕಾರ್ಯಗಳನ್ನು ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸೂಕ್ತಕ್ರಮ ಜರುಗಿಸಿ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಮನವಿಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮುಂದಿನ ಚುನಾವಣೆಯಲ್ಲಿ ತಮಗೆಲ್ಲರಿಗೂ ಕೂಡ ಶುಭವಾಗಲಿ. ಹೆಚ್ಚು ಆದರ್ಶಗಳನ್ನು ಆಧಾರವಾಗಿಟ್ಟುಕೊಂಡು ಚುನಾವಣೆಯ ಹೋರಾಟವನ್ನು ಮಾಡಿ. ತಾವುಗಳು ಗೆದ್ದು ಬಂದು ಆದರ್ಶಗಳ ಹಿನ್ನಲೆಯಲ್ಲಿ ಕೆಲಸ ಮಾಡತಕ್ಕಂಥ ಸನ್ನಿವೇಶ ಉಂಟಾಗಲಿ ಎಂದು ಶುಭ ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ. ಈ ದಿವಸದ ಕಾರ್ಯಕಲಾಪಗಳೊಂದಿಗೆ ಈ ವಿಧಾನಸಭೆಯ ಎಲ್ಲಾ ಕಾರ್ಯಕಲಾಪಗಳು ಕೂಡ ಅಂತ್ಯಗೊಳ್ಳುತ್ತವೆ. ಸಭೆಯನ್ನು ಅನಿರ್ಧಿಷ್ಟ ಕಾಲದವರೆಗೆ ಮುಂದೆ ಹಾಕುತ್ತಿದ್ದೇನೆ. ಎಲ್ಲರಿಗೂ ಧನ್ಯವಾದಗಳು.

(ಸದನವು ರಾತ್ರಿ 8-23ಗಂಟೆಗೆ ಮುಗಿಯಿತು. ಸಭೆಯನ್ನು ಅನಿರ್ದಿಷ್ಟ ಅವಧಿಯ ವರೆಗೆ ಮುಂದೂಡಲಾಯಿತು).

(+ ಈ ಚಿನ್ಹೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).